# ರಬ್ಬರ್ ಅಧಿನಿಯಮ, 1947

**[02-11-2004 ರ ಭಾರತ ರಾಜಪತ್ರದ ಖಿಘ ನೇ ಭಾಗದ, 1ನೇ ವಿಭಾಗದ, 30 ನೇ ಸಂಪುಟದ 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 53 ರಿಂದ 63 ರವರೆಗಿನ ಪುಟಗಳಲ್ಲಿ ಪ್ರಕಟಿತ]**

(1947ರ ಅಧಿನಿಯಮ ಸಂಖ್ಯೆ 24)

**ವಿಷಯಾನುಕ್ರಮಣಿಕೆ**

**ಪ್ರಕರಣಗಳು:**

1. ಚಿಕ್ಕ ಹೆಸರು ಮತ್ತು ವ್ಯಾಪ್ತಿ
2. ಒಕ್ಕೂಟದ ನಿಯಂತ್ರಣದ ವಿಹಿತತೆಯ ಬಗ್ಗೆ ಘೋಷಣೆ
3. ಪರಿಭಾಷೆಗಳು
4. ಮಂಡಲಿಯ ರಚನೆ
5. ಮಂಡಲಿಯಲ್ಲಿನ ಖಾಲಿ ಸ್ಥಾನಗಳು
6. ಅಧ್ಯಕ್ಷನ ವೇತನ ಮತ್ತು ಭತ್ಯೆಗಳು

6ಎ. ಮಂಡಲಿಯ ಕಾರ್ಯನಿರ್ವಾಹಕ ಅಧಿಕಾರಿಗಳು

7. ಮಂಡಳಿಯ ಸಮಿತಿಗಳು
8. ಮಂಡಲಿಯ ಪ್ರಕಾರ್ಯಗಳು

8ಎ. ಆಂತರಿಕ ಮಾರುಕಟ್ಟೆಯಲ್ಲಿ ಮಾರಾಟಕ್ಕಾಗಿ ರಬ್ಬರನ್ನು ಆಮದು ಮಾಡಿಕೊಳ್ಳಲು ಅಥವಾ ಆಂತರಿಕ ಮಾರುಕಟ್ಟೆಯಲ್ಲಿ ರಬ್ಬರನ್ನು ಖರೀದಿಸಲು ಮಂಡಲಿಯ ಅಧಿಕಾರ

8ಬಿ. ಮಂಡಲಿಯೊಂದಿಗೆ ಸಮಾಲೋಚನೆ

9. ಮಂಡಲಿಯ ನಿಧಿಗಳು

9ಎ. ಸಾಮಾನ್ಯ ನಿಧಿ

9ಬಿ. ಶೇಖರಿಸಿದ ನಿಧಿ

10. ನೋಂದಣಿ
11. ರಬ್ಬರಿನ ಆಮದು ಮತ್ತು ರಫ್ತುಗಳನ್ನು ನಿಷೇಧಿಸುವ ಅಥವಾ ನಿಯಂತ್ರಿಸುವ ಅಧಿಕಾರ
12. ಹೊಸ ರಬ್ಬರ್ ಉಪಕರವನ್ನು ವಿಧಿಸುವುದು
13. ರಬ್ಬರ್ ಮಾರಾಟದ ಗರಿಷ್ಠ ಮತ್ತು ಕನಿಷ್ಠ ದರಗಳನ್ನು ನಿಗದಿಪಡಿಸುವ ಅಧಿಕಾರ
14. ರಬ್ಬರಿನ ವಹಿವಾಟಿಗೆ ಲೈಸೆನ್ಸು ನೀಡಿಕೆ
15. 14ನೇ ಪ್ರಕರಣದ ಮೇರೆಗಿನ ಲೈಸೆನ್ಸುಗಳನ್ನು ಕುರಿತ ಉಪಬಂಧಗಳು
16. ರಬ್ಬರ್ ಸ್ವಾಧೀನದ ಮೇಲೆ ನಿರ್ಬಂಧ
17. ಗಿಡ ನಾಟಿ ಮಾಡಿಕೊಳ್ಳುವುದಕ್ಕಾಗಿ ಅಥವಾ ಮರುನಾಟಿ ಮಾಡುವುದಕ್ಕಾಗಿ ಲೈಸೆನ್ಸುಗಳು
18. ಲೈಸೆನ್ಸುದಾರರು ಸಲ್ಲಿಸಬೇಕಾದ ವರದಿಗಳು
19. ವಿಶೇಷ ಲೈಸೆನ್ಸುಗಳಿಗಾಗಿ ಶುಲ್ಕಗಳು

20. ವಿವರಪಟ್ಟಿಕೆಗಳ ಸಲ್ಲಿಕೆ ಮತ್ತು ಲೆಕ್ಕಪತ್ರಗಳ ನಿರ್ವಹಣೆ
21. ಜಮೀನು ಮತ್ತು ಆವರಣಗಳ ಪರಿಶೀಲನೆ
22. ಕೇಂದ್ರ ಸರ್ಕಾರದ ನಿಯಂತ್ರಣ
23. ಅಪೀಲು
24. ಮಂಡಲಿಯ ಲೆಕ್ಕಪತ್ರಗಳು
25. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ
26. ದಂಡಗಳು
27. ಪ್ರಾಸಿಕ್ಯೂಷನ್‌ಗಳ ಕಾರ್ಯವಿಧಾನ
27ಎ. ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿ
28. ಕಾನೂನು ವ್ಯವಹರಣೆಗಳ ಪ್ರತಿಬಂಧ
29. ಕೇಂದ್ರ ಸರ್ಕಾರದ ತಾತ್ಕಾಲಿಕ ಅಧಿಕಾರಗಳು

# ರಬ್ಬರ್ ಅಧಿನಿಯಮ, 1947

(1947ರ ಅಧಿನಿಯಮ ಸಂಖ್ಯೆ 24)

[18ನೇ ಏಪ್ರಿಲ್, 1947]

ರಬ್ಬರ್ ಕೈಗಾರಿಕೆಯನ್ನು ಒಕ್ಕೂಟದ ನಿಯಂತ್ರಣದಲ್ಲಿ ಅಭಿವೃದ್ಧಿಪಡಿಸುವುದಕ್ಕಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ರಬ್ಬರ್ ಕೈಗಾರಿಕೆಯನ್ನು ಒಕ್ಕೂಟದ ನಿಯಂತ್ರಣದಲ್ಲಿ ಅಭಿವೃದ್ಧಿಪಡಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದನ್ನು ಈ ಮುಂದಿನಂತೆ ಅಧಿನಿಯಮಿತಿಗೊಳಿಸಲಾಗಿದೆ:-

**1. ಚಿಕ್ಕ ಹೆಸರು ಮತ್ತು ವ್ಯಾಪ್ತಿ.-** (1) ಈ ಅಧಿನಿಯಮವನ್ನು ರಬ್ಬರ್ ಅಧಿನಿಯಮ, 1947 ಎಂದು ಕರೆಯತಕ್ಕದ್ದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

**2. ಒಕ್ಕೂಟದ ನಿಯಂತ್ರಣದ ವಿಹಿತತೆಯ ಬಗ್ಗೆ ಘೋಷಣೆ.-** ಒಕ್ಕೂಟವು ರಬ್ಬರ್ ಕೈಗಾರಿಕೆಯನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುವುದು ಸಾರ್ವಜನಿಕ ಹಿತಾಸಕ್ತಿಯಿಂದ ವಿಹಿತವಾಗಿರುವುದೆಂದು ಈ ಮೂಲಕ ಘೋಷಿಸಲಾಗಿದೆ.

**3. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ವಿಷಯಕ್ಕೆ ಅಥವಾ ಸಂದರ್ಭಕ್ಕೆ ವಿರುದ್ಧವಾದುದು ಏನಾದರೂ ಇದ್ದ ಹೊರತು,-

(ಎ) "ಮಂಡಲಿ" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ರಬ್ಬರ್ ಮಂಡಲಿ;

(ಬಿ) "ವ್ಯಾಪಾರಿ" ಎಂದರೆ ಸಗಟಾಗಿ ಅಥವಾ ಚಿಲ್ಲರೆಯಾಗಿ ರಬ್ಬರ್ ವ್ಯವಹಾರ ನಡೆಸುವ ಅಥವಾ ರಬ್ಬರ್ ದಾಸ್ತಾನುಗಳನ್ನು ಹೊಂದಿರುವ ಯಾರೇ ವ್ಯಕ್ತಿ, ಮತ್ತು ಅದರಲ್ಲಿ ವ್ಯಾಪಾರಿಯ ಪ್ರತಿನಿಧಿಯು ಅಥವಾ ಏಜೆಂಟನೂ ಸೇರುತ್ತಾನೆ;

(ಸಿ) "ಎಸ್ಟೇಟು" ಎಂದರೆ ರಬ್ಬರ್ ಸಸಿಗಳನ್ನು ನೆಟ್ಟಿರುವ ಭೂಮಿಯನ್ನು ಒಳಗೊಂಡಿರುವ ಹಾಗೂ ಒಂದೇ ಘಟಕವಾಗಿ ನಿರ್ವಹಿಸಲಾಗುತ್ತಿರುವ ಯಾವುದೇ ಪ್ರದೇಶ;

(ಡಿ) "ರಫ್ತು" ಮತ್ತು "ಆಮದು" ಎಂದರೆ ಕ್ರಮವಾಗಿ ಸಮುದ್ರ ಮಾರ್ಗ, ಭೂ ಮಾರ್ಗ ಅಥವಾ ವಾಯು ಮಾರ್ಗದ ಮೂಲಕ ಭಾರತದಿಂದ ಹೊರಕ್ಕೆ ಕಳುಹಿಸುವುದು ಮತ್ತು ಭಾರತದೊಳಕ್ಕೆ ತರುವುದು;

(ಡಿಡಿ) "ಭಾರತ" ಎಂದರೆ ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ, ಭಾರತದ ರಾಜ್ಯಕ್ಷೇತ್ರ;

(ಇ) "ತಯಾರಕ" ಎಂದರೆ ರಬ್ಬರನ್ನು ಉಪಯೋಗಿಸಿ ಮಾಡುವ ಯಾವುದೇ ವಸ್ತುವಿನ ತಯಾರಿಕೆಯಲ್ಲಿ ತೊಡಗಿರುವ ಯಾರೇ ವ್ಯಕ್ತಿ;

(ಎಫ್) "ಒಡೆಯ" ಎಂಬುದರಲ್ಲಿ ಒಂದು ಎಸ್ಟೇಟಿನ ಒಡೆಯನ ಯಾರೇ ಏಜೆಂಟ್ ಮತ್ತು ಎಸ್ಟೇಟಿನ ಸ್ವಾಧೀನ ಹೊಂದಿರುವ ಅಡಮಾನ ಪಡೆದವನು ಮತ್ತು ಅದನ್ನು ಗುತ್ತಿಗೆ ಪಡೆದವನು ಒಳಗೊಳ್ಳುತ್ತಾನೆ;

(ಜಿ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಹೆಚ್) "ರಬ್ಬರ್" ಎಂದರೆ-

(i) ಕಚ್ಚಾ ರಬ್ಬರ್ ಎಂದರೆ ಯಾವುದೇ ರಬ್ಬರ್ ಗಿಡದ ಎಲೆಗಳಿಂದ, ತೊಗಟೆಯಿಂದ ಅಥವಾ ಅದರ ಹಾಲಿನಿಂದ ತಯಾರಿಸಲಾದ ರಬ್ಬರ್;

(ii) ರಬ್ಬರ್ ಆಗಿ ಅದನ್ನು ಪರಿವರ್ತಿಸುವ ಪ್ರಕ್ರಿಯೆಯ ಕಾಲದಲ್ಲಿ ಅದು ಒಳಪಡುವ ಸಂಸ್ಕರಣದ ಯಾವುದೇ ಹಂತದಲ್ಲಿರುವ ದ್ರವ ರೂಪದ ಅಥವಾ ಘನ ರೂಪದ ಯಾವುದೇ ರಬ್ಬರ್ ಗಿಡದ ಹಾಲು;

(iii) ಯಾವುದೇ ಸಾರೀಕರಣದ ಸ್ಥಿತಿಯಲ್ಲಿರುವ (ಒಣ ರಬ್ಬರ್ ಅಂಶವುಳ್ಳ ಹಾಲು),

ಮತ್ತು ಅದರಲ್ಲಿ ತುಣುಕು ರಬ್ಬರ್, ಹಾಳೆ ರಬ್ಬರ್, ಪುಡಿ ರಬ್ಬರ್ ಮತ್ತು ಎಲ್ಲ ನಮೂನೆಯ ಮತ್ತು ವಿಧಗಳ ಕ್ರೇಪ್ ರಬ್ಬರ್, ಆದರೆ ತಯಾರಿಸಲಾದ ಯಾವುದೇ ವಸ್ತುವಿನಲ್ಲಿರುವ ರಬ್ಬರನ್ನು ಒಳಗೊಳ್ಳುವುದಿಲ್ಲ;

(ಐ) "ರಬ್ಬರ್ ಗಿಡ" ಇದರಲ್ಲಿ ಈ ಕೆಳಕಂಡ ಯಾವುವೇ ಗಿಡಗಳು, ಮರಗಳು, ಕುರುಚಲು ಗಿಡಗಳು ಅಥವಾ ಬಳ್ಳಿಗಳು ಒಳಗೊಳ್ಳುತ್ತವೆ, ಎಂದರೆ:-

(i) ಹೆವಿಯ ಬ್ರೆಜಿಲೈನ್ಸಿಸ್ (ಪಾರ ರಬ್ಬರ್),

(ii) ಮಾನಿಹಟ್ ಗ್ಲಾಜಿಯೊವಿ (ಸಿಯರಾ ರಬ್ಬರ್),

(iii) ಕಾಸ್ಟಿಲ್ಲೊ ಇಲಾಸ್ಟಿಕಾ,

(iv) ಫಿಕಸ್ ಎಲಾಸ್ಟಿಕಾ (ರಾಂಬೋಂಗ್), ಮತ್ತು

(v) ಮಂಡಲಿಯು, ಭಾರತ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳಿಗಾಗಿ ರಬ್ಬರ್ ಗಿಡವೆಂಬುದಾಗಿ ಘೋಷಿಸುವ ಯಾವುದೇ ಇತರ ಗಿಡ;

(ಜೆ) "ರಬ್ಬರ್ ಉತ್ಪಾದನಾ ಕಮೀಷನರ್" ಎಂದರೆ ಈ ಅಧಿನಿಯಮದ ಮೇರೆಗೆ ನೇಮಕ ಮಾಡಲಾದ ರಬ್ಬರ್ ಉತ್ಪಾದನಾ ಕಮೀಷನರ್;

(ಕೆ) "ಸಣ್ಣ ಬೆಳೆಗಾರ" ಎಂದರೆ ಐವತ್ತು ಎಕರೆ ವಿಸ್ತೀರ್ಣವನ್ನು ಮೀರದಿರುವ ಎಸ್ಟೇಟಿನ ಒಡೆಯ.

**4. ಮಂಡಲಿಯ ರಚನೆ.**- (1) ಈ ಅಧಿನಿಯಮದ ಪ್ರಾರಂಭದ ತರುವಾಯ ಆದಷ್ಟು ಬೇಗನೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ

ಉದ್ದೇಶಗಳಿಗಾಗಿ ರಬ್ಬರ್ ಮಂಡಲಿಯೆಂದು ಕರೆಯಲಾಗುವ ಒಂದು ಮಂಡಲಿಯನ್ನು ರಚಿಸತಕ್ಕುದು.

(2) ಮಂಡಲಿಯು, ರಬ್ಬರ್ ಮಂಡಲಿಯ ಹೆಸರಿನ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಹಾಗೂ ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನೂ ಆರ್ಜಿಸುವ ಮತ್ತು ಧಾರಣೆ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರವಿರುವ ನಿಗಮಿತ ನಿಕಾಯವಾಗಿರತಕ್ಕುದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕುದು ಮತ್ತು ದಾವೆಗೆ ಗುರಿಯಾಗತಕ್ಕುದು.

(3) ಮಂಡಲಿಯು, ಈ ಕೆಳಕಂಡವರನ್ನು ಒಳಗೊಂಡಿರತಕ್ಕುದು, ಎಂದರೆ-

(ಎ) ಕೇಂದ್ರ ಸರ್ಕಾರವು ನೇಮಿಸಬೇಕಾದ ಒಬ್ಬ ಅಧ್ಯಕ್ಷ;

(ಬಿ) ತಮಿಳುನಾಡು ರಾಜ್ಯವನ್ನು ಪ್ರತಿನಿಧಿಸುವ ಇಬ್ಬರು ಸದಸ್ಯರು, ಇವರಲ್ಲಿ ಒಬ್ಬನು ರಬ್ಬರ್ ಉತ್ಪಾದನೆಯ ಹಿತಾಸಕ್ತಿಯನ್ನು ಪ್ರತಿನಿಧಿಸುವ ವ್ಯಕ್ತಿಯಾಗಿರತಕ್ಕುದು;

(ಸಿ) ಕೇರಳ ರಾಜ್ಯವನ್ನು ಪ್ರತಿನಿಧಿಸುವ ಎಂಟು ಸದಸ್ಯರು, ಮತ್ತು ಅವರಲ್ಲಿ ಆರು ಮಂದಿ ರಬ್ಬರ್ ಉತ್ಪಾದನಾ ಹಿತಾಸಕ್ತಿಯನ್ನು ಪ್ರತಿನಿಧಿಸುವ ವ್ಯಕ್ತಿಗಳಾಗಿರತಕ್ಕುದು, ಅಂಥ ಆರು ಮಂದಿಯಲ್ಲಿ ಇಬ್ಬರು ಸಣ್ಣ ಬೆಳೆಗಾರರನ್ನು ಪ್ರತಿನಿಧಿಸುವ ವ್ಯಕ್ತಿಗಳಾಗಿರತಕ್ಕುದು;

(ಡಿ) ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ ಹತ್ತು ಸದಸ್ಯರು, ಅವರಲ್ಲಿ ಇಬ್ಬರು ತಯಾರಕರನ್ನು ಮತ್ತು ನಾಲ್ವರು ಕಾರ್ಮಿಕರನ್ನು ಪ್ರತಿನಿಧಿಸತಕ್ಕುದು;

(ಇ) ಸಂಸತ್ತಿನ ಮೂವರು ಸದಸ್ಯರು, ಅವರಲ್ಲಿ ಇಬ್ಬರನ್ನು ಲೋಕಸಭೆಯು ಚುನಾಯಿಸತಕ್ಕುದು ಮತ್ತು ಒಬ್ಬನನ್ನು ರಾಜ್ಯಸಭೆಯು ಚುನಾಯಿಸತಕ್ಕುದು; ಮತ್ತು

(ಎಫ್) ರಬ್ಬರ್ ಉತ್ಪಾದನಾ ಕಮೀಷನರ್, ಪದನಿಮಿತ್ತ.

(4) ತಮಿಳುನಾಡು ಮತ್ತು ಕೇರಳ ರಾಜ್ಯಗಳನ್ನು ಪ್ರತಿನಿಧಿಸುವ ವ್ಯಕ್ತಿಗಳನ್ನು ನಿಯಮಿಸಬಹುದಾದಂತೆ ಚುನಾಯಿಸತಕ್ಕುದು ಅಥವಾ ನಾಮನಿರ್ದೇಶನ ಮಾಡತಕ್ಕುದು.

(5) ಕೇಂದ್ರ ಸರ್ಕಾರದ ಯಾರೇ ಅಧಿಕಾರಿಯನ್ನು, ಆ ಸರ್ಕಾರದ ಪರವಾಗಿ ಪ್ರತಿನಿಯೋಜಿಸಿದಾಗ, ಅವನು ಮಂಡಲಿಯ ಸಭೆಗಳಲ್ಲಿ ಹಾಜರಾಗಿ ಆ ಸಭೆಗಳ ವ್ಯವಹರಣೆಗಳಲ್ಲಿ ಭಾಗವಹಿಸಲು ಹಕ್ಕನ್ನು ಹೊಂದಿರತಕ್ಕುದು, ಆದರೆ ಸಭೆಗಳಲ್ಲಿ ಮತ ನೀಡಲು ಹಕ್ಕುಳ್ಳವನಾಗಿರತಕ್ಕುದಲ್ಲ.

(6) ಮಂಡಲಿಯು, ಅದರ ಸದಸ್ಯರ ಪೈಕಿ ಒಬ್ಬನನ್ನು ಉಪಾಧ್ಯಕ್ಷನಾಗಿ ಚುನಾಯಿಸತಕ್ಕುದು ಮತ್ತು ಅವನು, ನಿಯಮಿಸಬಹುದಾದಂತೆ ಅಧ್ಯಕ್ಷನ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಅಥವಾ ಅಧ್ಯಕ್ಷನು ಅವನಿಗೆ ವಹಿಸಿಕೊಡಬಹುದಾದಂಥ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಚಲಾಯಿಸತಕ್ಕುದು ಮತ್ತು ನೆರವೇರಿಸತಕ್ಕುದು.

(7) ಮಂಡಲಿಯ ಸದಸ್ಯರು, ನಿಯಮಿಸಬಹುದಾದಂಥ ಭತ್ಯಗಳನ್ನು ಮಂಡಲಿಯಿಂದ ಪಡೆಯತಕ್ಕುದು.

(8) ಮಂಡಲಿಯ ಸದಸ್ಯನಾಗಿ ಪದಧಾರಣ ಮಾಡಿರುವವನು ಸಂಸತ್ತಿನ ಉಭಯ ಸದನಗಳ ಸದಸ್ಯನಾಗಿ ಆಯ್ಕೆಯಾಗದಂತೆ ಅಥವಾ ಸದಸ್ಯನಾಗಿರದಂತೆ ಆ ಅಧಿಕಾರ ಪದವು ಅವನನ್ನು ಅನರ್ಹಗೊಳಿಸತಕ್ಕುದಲ್ಲವೆಂದು ಈ ಮೂಲಕ ಘೋಷಿಸಲಾಗಿದೆ.

**5. ಮಂಡಲಿಯಲ್ಲಿನ ಖಾಲಿ ಸ್ಥಾನಗಳು.–** (1) 4ನೇ ಪ್ರಕರಣದ ಮೇರೆಗೆ ಯಾವುದೇ ನಾಮನಿರ್ದೇಶನವನ್ನು ಮಾಡಲು ಹಕ್ಕುಳ್ಳ ಯಾವುದೇ ಪ್ರಾಧಿಕಾರ ಅಥವಾ ನಿಕಾಯವು ಅದನ್ನು ಯುಕ್ತ ಕಾಲದಲ್ಲಿ ನಾಮನಿರ್ದೇಶನವನ್ನು ಮಾಡಲು ತಪ್ಪಿದರೆ, ಕೇಂದ್ರ ಸರ್ಕಾರವು ಸ್ವತಃ ಆ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಒಬ್ಬ ಸದಸ್ಯನನ್ನು ನಾಮನಿರ್ದೇಶನ ಮಾಡಬಹುದು.

(2) ಮಂಡಲಿಯ ಯಾರೇ ಸದಸ್ಯನು ಮರಣ ಹೊಂದಿರುವಲ್ಲಿ, ರಾಜೀನಾಮೆ ಕೊಟ್ಟಿರುವಲ್ಲಿ, ಅಥವಾ ಅವನನ್ನು ತೆಗೆದುಹಾಕಿರುವಲ್ಲಿ, ಅಥವಾ ಅವನು ಭಾರತದಲ್ಲಿ ವಾಸಿಸುವುದು ಸಮಾಪ್ತವಾಗಿರುವಲ್ಲಿ ಅಥವಾ ಅವನು ಕಾರ್ಯ ನಿರ್ವಹಿಸಲು ಅಸಮರ್ಥನಾಗಿರುವಲ್ಲಿ, ಕೇಂದ್ರ ಸರ್ಕಾರವು, 4ನೇ ಪ್ರಕರಣದ ಮೇರೆಗೆ ಸದಸ್ಯನನ್ನು ನಾಮನಿರ್ದೇಶನ ಮಾಡಲು ಹಕ್ಕುಳ್ಳ ಪ್ರಾಧಿಕಾರದ ಅಥವಾ ನಿಕಾಯದ ಶಿಫಾರಸ್ಸಿನ ಮೇಲೆ ಅಥವಾ ಅಂಥ ಶಿಫಾರಸ್ಸನ್ನು ಯುಕ್ತ ಕಾಲದೊಳಗೆ ಮಾಡದಿರುವಲ್ಲಿ, ಸ್ವಪ್ರೇರಣೆಯಿಂದ, ಆ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಒಬ್ಬ ವ್ಯಕ್ತಿಯನ್ನು ನೇಮಕ ಮಾಡತಕ್ಕದ್ದು.

(3) ಮಂಡಲಿಯಲ್ಲಿ ಯಾವುದೇ ಸ್ಥಾನವು ಖಾಲಿಯಿದೆಯೆಂಬ ಅಥವಾ ಮಂಡಲಿಯ ರಚನೆಯಲ್ಲಿ ಯಾವುದೇ ದೋಷವಿದೆಯೆಂಬ ಕಾರಣ ಮಾತ್ರದಿಂದಲೇ ಮಂಡಲಿಯು ಮಾಡಿದ ಯಾವುದೇ ಕಾರ್ಯವನ್ನು ಪ್ರಶ್ನಿಸತಕ್ಕುದಲ್ಲ.

**6. ಅಧ್ಯಕ್ಷನ ವೇತನ ಮತ್ತು ಭತ್ಯೆಗಳು.–** ಅಧ್ಯಕ್ಷನು, ಕೇಂದ್ರ ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಬಹುದಾದಂಥ ವೇತನಗಳಿಗೆ ಮತ್ತು ಭತ್ಯೆಗಳಿಗೆ ಹಕ್ಕುಳ್ಳವನಾಗಿರತಕ್ಕುದು ಮತ್ತು ರಜೆ, ಪಿಂಚಣಿ, ಭವಿಷ್ಯ ನಿಧಿ ಮತ್ತು ಇತರ ವಿಷಯಗಳ ಸಂಬಂಧದಲ್ಲಿ ನಿಗದಿಪಡಿಸಬಹುದಾದಂಥ ಸೇವಾ ಷರತ್ತುಗಳಿಗೆ ಒಳಪಟ್ಟಿರತಕ್ಕುದು.

**6ಎ. ಮಂಡಲಿಯ ಕಾರ್ಯನಿರ್ವಾಹಕ ಅಧಿಕಾರಿಗಳು.–** (1) ಕೇಂದ್ರ ಸರ್ಕಾರವು, ಮಂಡಲಿಯ ನಿರ್ದೇಶನದ ಮೇರೆಗೆ ನಿಯಮಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸಲು ಮತ್ತು ಅಂಥ ಕರ್ತವ್ಯಗಳನ್ನು ನೆರವೇರಿಸಲು ಒಬ್ಬ ರಬ್ಬರ್ ಉತ್ಪಾದನಾ ಕಮೀಷನರ್‌ನನ್ನು ನೇಮಕ ಮಾಡತಕ್ಕುದು.

(2) ಕೇಂದ್ರ ಸರ್ಕಾರವು, ಮಂಡಲಿಗೆ ಒಬ್ಬ ಕಾರ್ಯದರ್ಶಿಯನ್ನು ನೇಮಕ ಮಾಡತಕ್ಕುದು ಮತ್ತು ಅವನು ಮಂಡಲಿಯ ನಿರ್ದೇಶನದ ಮೇರೆಗೆ, ನಿಯಮಿಸಬಹುದಾದಂಥ ಅಥವಾ ಅಧ್ಯಕ್ಷನು ಅವನಿಗೆ ವಹಿಸಿಕೊಡಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕುದು ಮತ್ತು ಕರ್ತವ್ಯಗಳನ್ನು ನೆರವೇರಿಸತಕ್ಕುದು.

(3) ಮಂಡಲಿಯ ರಬ್ಬರ್ ಉತ್ಪಾದನಾ ಕಮೀಷನರ್ ಮತ್ತು ಕಾರ್ಯದರ್ಶಿಯು ಕೇಂದ್ರ ಸರ್ಕಾರವು ನಿಗದಿಪಡಿಸಬಹುದಾದಂಥ ವೇತನಗಳು ಮತ್ತು ಭತ್ಯೆಗಳಿಗೆ ಹಕ್ಕುಳ್ಳವರಾಗಿರತಕ್ಕುದು ಮತ್ತು ರಜೆ, ಪಿಂಚಣಿ, ಭವಿಷ್ಯ ನಿಧಿ ಮತ್ತು ಇತರ ವಿಷಯಗಳ ಸಂಬಂಧದಲ್ಲಿ ನಿಗದಿಪಡಿಸಬಹುದಾದಂಥ ಸೇವಾ ಷರತ್ತುಗಳಿಗೊಳಪಟ್ಟಿರತಕ್ಕುದು.

(4) ಅಧ್ಯಕ್ಷನು, ರಬ್ಬರ್ ಉತ್ಪಾದನಾ ಕಮೀಷನರ್‌ನು ಮತ್ತು ಕಾರ್ಯದರ್ಶಿಯು, ಕೇಂದ್ರ ಸರ್ಕಾರದ ಅನುಮತಿಯ ಹೊರತು ಈ ಅಧಿನಿಯಮದ ಮೇರೆಗಿನ ಅವರ ಕರ್ತವ್ಯಗಳಿಗೆ ಸಂಬಂಧಿಸಿಲ್ಲದ ಯಾವುದೇ ಕಾರ್ಯವನ್ನು ಕೈಗೊಳ್ಳತಕ್ಕುದಲ್ಲ.

**7. ಮಂಡಳಿಯ ಸಮಿತಿಗಳು.-** (1) * * * *

(2) ಮಂಡಲಿಯು, ಈ ಅಧಿನಿಯಮದ ಮೇರೆಗಿನ ಅದರ ಕರ್ತವ್ಯಗಳ ಮತ್ತು ಪ್ರಕಾರ್ಯಗಳನ್ನು ದಕ್ಷತೆಯಿಂದ ನೆರವೇರಿಸುವುದಕ್ಕಾಗಿ ಅವಶ್ಯವಿರಬಹುದಾದಂಥ ಸಮಿತಿಗಳನ್ನು ನೇಮಕ ಮಾಡತಕ್ಕುದು.

(3) ಮಂಡಲಿಯು, ಮಂಡಲಿಯ ಸದಸ್ಯರಲ್ಲದಿರುವವರ ಪೈಕಿ ತಾನು ಸೂಕ್ತವೆಂದು ಯೋಚಿಸುವಷ್ಟು ಮಂದಿಯನ್ನು, (2)ನೇ ಉಪಪ್ರಕರಣದ ಮೇರೆಗೆ ನೇಮಕ ಮಾಡಲಾದ ಯಾವುದೇ ಸಮಿತಿಯ ಸಹ ಸದಸ್ಯರನ್ನಾಗಿ ನೇಮಕ ಮಾಡಿಕೊಳ್ಳುವ ಅಧಿಕಾರವನ್ನು ಹೊಂದಿರತಕ್ಕುದು.

(4) ಮಂಡಲಿಯು, ರಬ್ಬರಿನ ಮಾರುಕಟ್ಟೆ ವ್ಯವಹಾರ ಅಥವಾ ದಾಸ್ತಾನಿನ ಸಂಬಂಧದಲ್ಲಿ ಅದರ ಯಾವುವೇ ಪ್ರಕಾರ್ಯಗಳನ್ನು ಅದರ ಪರವಾಗಿ ನಿರ್ವಹಿಸಲು ಏಜೆಂಟರನ್ನು ನೇಮಕ ಮಾಡಿಕೊಳ್ಳಬಹುದು ಮತ್ತು ಅಧಿಕೃತಗೊಳಿಸಬಹುದು.

**8. ಮಂಡಲಿಯ ಪ್ರಕಾರ್ಯಗಳು.-** (1) ಮಂಡಲಿಯು ಸೂಕ್ತವೆಂದು ಯೋಚಿಸಬಹುದಾದಂಥ ಕ್ರಮಗಳನ್ನು ಕೈಗೊಳ್ಳುವ ಮೂಲಕ ರಬ್ಬರ್ ಕೈಗಾರಿಕೆ ಅಭಿವೃದ್ಧಿಗೆ ಉತ್ತೇಜನ ನೀಡುವುದು ಅದರ ಕರ್ತವ್ಯವಾಗಿರತಕ್ಕುದು.

(2) ಹಿಂದೆ ಹೇಳಿದ ಉಪಬಂಧದ ಸಾಮಾನ್ಯತೆಗೆ ಪ್ರತಿಕೂಲವಾಗದಂತೆ, ಅದರಲ್ಲಿ ಉಲ್ಲೇಖಿಸಲಾದ ಕ್ರಮಗಳು - ಕೆಳಕಂಡವುಗಳ ಬಗ್ಗೆ ಉಪಬಂಧ ಕಲ್ಪಿಸಬಹುದು -

(ಎ) ವೈಜ್ಞಾನಿಕ, ತಾಂತ್ರಿಕ ಮತ್ತು ಆರ್ಥಿಕ ಸಂಶೋಧನೆಯನ್ನು ಕೈಗೊಳ್ಳುವುದು, ಅದಕ್ಕೆ ಸಹಾಯ ಮಾಡುವುದು ಅಥವಾ ಉತ್ತೇಜನ ನೀಡುವುದು;

(ಬಿ) ಸಸಿ ನೆಡುವುದು, ಬೇಸಾಯ, ಗೊಬ್ಬರ ಹಾಕುವುದು ಮತ್ತು ನೀರು ಮೊದಲಾದ ದ್ರವಗಳ ಸಿಂಪಡಣೆ ಇವುಗಳ ಬಗ್ಗೆ ಸುಧಾರಿತ ವಿಧಾನಗಳಲ್ಲಿ ವಿದ್ಯಾರ್ಥಿಗಳನ್ನು ತರಬೇತುಗೊಳಿಸುವುದು;

(ಸಿ) ರಬ್ಬರ್ ಬೆಳೆಗಾರರಿಗೆ ತಾಂತ್ರಿಕ ಸಲಹೆಗಳನ್ನು ನೀಡುವುದು;

(ಡಿ) ರಬ್ಬರ್ ಮಾರುಕಟ್ಟೆ ವ್ಯವಹಾರವನ್ನು ಅಭಿವೃದ್ಧಿಪಡಿಸುವುದು;

(ಇ) ಎಸ್ಟೇಟು ಒಡೆಯರಿಂದ, ವ್ಯಾಪಾರಿಗಳಿಂದ ಮತ್ತು ತಯಾರಕರಿಂದ ಅಂಕಿಅಂಶಗಳನ್ನು ಸಂಗ್ರಹಿಸುವುದು;

(ಎಫ್) ಕೆಲಸಗಾರರಿಗೆ ಉತ್ತಮವಾದ ಕಾರ್ಯ ಪರಿಸರವನ್ನು ಒದಗಿಸುವುದು ಮತ್ತು ಸೌಕರ್ಯಗಳು ಮತ್ತು ಪ್ರೋತ್ಸಾಹಧನಗಳನ್ನು ಒದಗಿಸುವುದು ಮತ್ತು ಅವುಗಳನ್ನು ಸುಧಾರಿಸುವುದು;

(ಜಿ) ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೇರೆಗೆ ಮಂಡಲಿಯಲ್ಲಿ ನಿಹಿತಗೊಳಿಸಬಹುದಾದ ಯಾವುವೇ ಇತರ ಕರ್ತವ್ಯಗಳನ್ನು ನಿರ್ವಹಿಸುವುದು.

(3) ಕೆಳಕಂಡವುಗಳು ಸಹ ಮಂಡಲಿಯ ಕರ್ತವ್ಯಗಳಾಗಿರತಕ್ಕುದು-

(ಎ) ರಬ್ಬರಿನ ಆಮದು ಮತ್ತು ರಫ್ತು ಸೇರಿದಂತೆ, ರಬ್ಬರ್ ಕೈಗಾರಿಕೆಯ ಅಭಿವೃದ್ಧಿಗೆ ಸಂಬಂಧಪಟ್ಟ ಎಲ್ಲ ವಿಷಯಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡುವುದು;

(ಬಿ) ರಬ್ಬರಿಗೆ ಸಂಬಂಧಿಸುವ ಯಾವುದೇ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಅಥವಾ ಸ್ಕೀಂನಲ್ಲಿ ಭಾಗವಹಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸಲಹೆಯನ್ನು ನೀಡುವುದು;

(ಸಿ) ತನ್ನ ಕಾರ್ಯ ಚಟುವಟಿಕೆಗಳ ಮತ್ತು ಈ ಅಧಿನಿಯಮದ ಅನುಷ್ಠಾನ ಕುರಿತ ಅರ್ಧ ವಾರ್ಷಿಕ ವರದಿಗಳನ್ನು ಕೇಂದ್ರ ಸರ್ಕಾರಕ್ಕೆ ಮತ್ತು ನಿಯಮಿಸಬಹುದಾದಂಥ ಇತರ ಪ್ರಾಧಿಕಾರಗಳಿಗೆ ಸಲ್ಲಿಸುವುದು;

(ಡಿ) ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂತೆ ರಬ್ಬರ್ ಕೈಗಾರಿಕೆಗೆ ಸಂಬಂಧಪಟ್ಟಂಥ ಇತರ ವರದಿಗಳನ್ನು ಸಿದ್ಧಪಡಿಸಿ ಸಲ್ಲಿಸುವುದು.

**8ಎ. ಆಂತರಿಕ ಮಾರುಕಟ್ಟೆಯಲ್ಲಿ ಮಾರಾಟಕ್ಕಾಗಿ ರಬ್ಬರನ್ನು ಆಮದು ಮಾಡಿಕೊಳ್ಳಲು ಅಥವಾ ಆಂತರಿಕ ಮಾರುಕಟ್ಟೆಯಲ್ಲಿ ರಬ್ಬರನ್ನು ಖರೀದಿಸಲು ಮಂಡಲಿಯ ಅಧಿಕಾರ.-** ಮಂಡಲಿಯು, ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದು, ಕೇಂದ್ರ ಸರ್ಕಾರವು ನಿಗದಿಪಡಿಸಬಹುದಾದಂಥ ಬೆಲೆಗಳಲ್ಲಿ ಆಂತರಿಕ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ರಬ್ಬರನ್ನು ಆಮದು ಮಾಡಿಕೊಳ್ಳುವುದು ಅಥವಾ ಆಂತರಿಕ ಮಾರುಕಟ್ಟೆಯಲ್ಲಿ ರಬ್ಬರನ್ನು ಖರೀದಿಸುವುದು ಕಾನೂನು ಸಮ್ಮತವಾಗಿರತಕ್ಕುದು.

**8ಬಿ. ಮಂಡಲಿಯೊಂದಿಗೆ ಸಮಾಲೋಚನೆ.-** ಈ ಅಧಿನಿಯಮದ ಮೇರೆಗೆ ಮಂಡಲಿಯ ವ್ಯವಹಾರಗಳಿಗೆ ಸಂಬಂಧಿಸಿದ ಯಾವುದೇ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಮುಂಚೆ ಕೇಂದ್ರ ಸರ್ಕಾರವು ಸಾಮಾನ್ಯವಾಗಿ ಮಂಡಲಿಯೊಂದಿಗೆ ಸಮಾಲೋಚಿಸತಕ್ಕುದು:

ಪರಂತು, ಕೇಂದ್ರ ಸರ್ಕಾರವು ಕೈಗೊಂಡ ಯಾವುದೇ ಕ್ರಮವು, ಅಂಥ ಸಮಾಲೋಚನೆಯನ್ನು ಮಾಡದೆಯೇ ಕೈಗೊಳ್ಳಲಾಗಿತ್ತೆಂಬ ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕುದಲ್ಲ ಅಥವಾ ಅದನ್ನು ಪ್ರಶ್ನಿಸತಕ್ಕುದಲ್ಲ.

**9. ಮಂಡಲಿಯ ನಿಧಿಗಳು.-** (1) ರಬ್ಬರ್ ನಿಯಂತ್ರಣ ಮತ್ತು ಉತ್ಪಾದನಾ ಆದೇಶ, 1946ರ ಮೇರೆಗೆ ರಚಿತವಾದ ಭಾರತ ರಬ್ಬರ್ ಉತ್ಪಾದನಾ ಮಂಡಲಿಯನ್ನು ಈ ಮೂಲಕ ವಿಸರ್ಜಿಸಲಾಗಿದೆ ಮತ್ತು ಆ ಮಂಡಲಿಯಲ್ಲಿ ನಿಹಿತವಾಗಿದ್ದ ಎಲ್ಲ ನಿಧಿಗಳು ಮತ್ತು ಇತರ ಸ್ವತ್ತುಗಳು ಮತ್ತು ಅದರ ಎಲ್ಲ ಹೊಣೆಗಳು ಕ್ರಮವಾಗಿ ಈ ಅಧಿನಿಯಮದ ಮೇರೆಗೆ ರಚಿತವಾದ ಮಂಡಲಿಯಲ್ಲಿ ನಿಹಿತವಾಗತಕ್ಕುದು ಮತ್ತು ಆ ಮಂಡಲಿಯ ಹೊಣೆಗಳಾಗತಕ್ಕುದು.

(2) ಮಂಡಲಿಯು, ಸಾಮಾನ್ಯ ನಿಧಿ ಮತ್ತು ಶೇಖರಿಸಿದ ನಿಧಿ ಎಂಬ ಎರಡು ನಿಧಿಗಳನ್ನು ನಿರ್ವಹಿಸತಕ್ಕುದು.

**9ಎ. ಸಾಮಾನ್ಯ ನಿಧಿ.-** (1) ಸಾಮಾನ್ಯ ನಿಧಿಗೆ ಕೆಳಕಂಡವುಗಳನ್ನು ಜಮೆ ಮಾಡತಕ್ಕುದು-

(ಎ) ರಬ್ಬರ್ (ಉತ್ಪಾದನೆ ಮತ್ತು ಮಾರುಕಟ್ಟೆ ವ್ಯವಹಾರ) ತಿದ್ದುಪಡಿ ಅಧಿನಿಯಮ, 1954ರ ಪ್ರಾರಂಭಕ್ಕೆ ನಿಕಟ ಪೂರ್ವದಲ್ಲಿ ಮಂಡಲಿಯ ನಿಧಿಗಳಾಗಿರತಕ್ಕ ಎಲ್ಲ ಮೊತ್ತಗಳು;

(ಬಿ) 12ನೇ ಪ್ರಕರಣದ (7)ನೇ ಉಪಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಮಂಡಲಿಗೆ ಸಂದಾಯ ಮಾಡಿದ ಎಲ್ಲ ಮೊಬಲಗುಗಳು.

(2) ಸಾಮಾನ್ಯ ನಿಧಿಯನ್ನು ಕೆಳಕಂಡವುಗಳ ಬಗ್ಗೆ ಉಪಯೋಗಿಸತಕ್ಕುದು-

(ಎ) ಮಂಡಳಿಯ ವೆಚ್ಚಗಳನ್ನು ಭರಿಸುವುದು;

(ಬಿ) 8ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಕ್ರಮಗಳಿಗೆ ಆದ ವೆಚ್ಚಗಳನ್ನು ಭರಿಸುವುದು;

(ಸಿ) ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಿದ ನಿಯಮಗಳ ಮೇರೆಗಿನ ಪ್ರಕಾರ್ಯಗಳ ನಿರ್ವಹಣೆಯಲ್ಲಿ ವಹಿಸಿದ ವೆಚ್ಚಗಳನ್ನು ಭರಿಸುವುದು; ಮತ್ತು

(ಡಿ) ಮಂಡಲಿಯು, ಎಸ್ಟೇಟುಗಳ ಅಭಿವೃದ್ಧಿಗಾಗಿ ಅವಶ್ಯಕವೆಂದು ಯೋಚಿಸಬಹುದಾದಂತೆ ರಬ್ಬರ್ ಎಸ್ಟೇಟುಗಳಿಗೆ ಅನುದಾನಗಳನ್ನು ನೀಡುವುದು ಅಥವಾ ರಬ್ಬರ್ ಎಸ್ಟೇಟುಗಳಿಗೆ ನೀಡುವ ಅಂಥ ಇತರ ಸಹಾಯದ ವೆಚ್ಚಗಳನ್ನು ಭರಿಸುವುದು.

**9ಬಿ. ಶೇಖರಿಸಿದ ನಿಧಿ.**- (1) ಶೇಖರಿಸಿದ ನಿಧಿಗೆ ಕೆಳಕಂಡವುಗಳನ್ನು ಜಮೆ ಮಾಡತಕ್ಕುದು-

(ಎ) 8ಎ ಪ್ರಕರಣದ ಮೇರೆಗೆ ಆಮದು ಮಾಡಿಕೊಂಡ ಅಥವಾ ಖರೀದಿಸಿದ ರಬ್ಬರ್ ಮಾರಾಟದಿಂದ ಬಂದ ಎಲ್ಲ ಮೊತ್ತಗಳು;

(ಬಿ) ಮಂಡಲಿಯು, ಕೇಂದ್ರ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದು, ಸಾಮಾನ್ಯ ನಿಧಿಯಿಂದ ಶೇಖರಿಸಿದ ನಿಧಿಗೆ ವರ್ಗಾಯಿಸಬಹುದಾದ ಯಾವುದೇ ಇತರ ಮೊತ್ತ.

(2) ಶೇಖರಿಸಿದ ನಿಧಿಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಸಣ್ಣ ಬೆಳೆಗಾರರ ಪುನರ್ವಸತಿಗಾಗಿ ಮಾತ್ರವೇ ಉಪಯೋಗಿಸತಕ್ಕುದು.

**10. ನೋಂದಣಿ.**- (1) ರಬ್ಬರ್ ಸಸಿಗಳನ್ನು ಬೆಳೆಸಿರುವ ಭೂಮಿಯ ಒಡೆತನವನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯು, ಅಂಥ ಭೂಮಿಯಲ್ಲಿ ಒಂದು ಎಸ್ಟೇಟು ಅಥವಾ ಒಂದಕ್ಕಿಂತ ಹೆಚ್ಚು ಎಸ್ಟೇಟುಗಳು ಇದ್ದರೆ, ಮತ್ತು ಅದು ಪೂರ್ಣವಾಗಿ ಆಗಲಿ, ಅಥವಾ ಭಾಗಶಃವಾಗಿ ಆಗಲಿ ಭಾರತದಲ್ಲಿ ಇದ್ದರೆ, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಒಂದು ತಿಂಗಳು ಮುಕ್ತಾಯವಾಗುವುದಕ್ಕೆ ಮುಂಚೆ ಅವನು ಒಡೆತನ ಹೊಂದಿರುವ ಪ್ರತಿಯೊಂದು ಎಸ್ಟೇಟಿನ ಒಡೆಯನೆಂದು ನೋಂದಾಯಿಸಬೇಕೆಂದು ಕೋರಿ ಮಂಡಲಿಗೆ ಅರ್ಜಿ ಸಲ್ಲಿಸತಕ್ಕದ್ದು.

(2) ಒಮ್ಮೆ ಮಾಡಲಾದ ನೋಂದಣಿಯು, ಮಂಡಲಿಯು ಅದನ್ನು ರದ್ದುಪಡಿಸುವವರೆಗೂ ಜಾರಿಯಲ್ಲಿರತಕ್ಕುದು.

**11. ರಬ್ಬರಿನ ಆಮದು ಮತ್ತು ರಫ್ತುಗಳನ್ನು ನಿಷೇಧಿಸುವ ಅಥವಾ ನಿಯಂತ್ರಿಸುವ ಅಧಿಕಾರ.**- (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ಸಾಮಾನ್ಯವಾಗಿಯಾಗಲೀ ಅಥವಾ ನಿರ್ದಿಷ್ಟಪಡಿಸಿದ ಪ್ರಕರಣಗಳ ವರ್ಗಗಳ ಸಂದರ್ಭಗಳಲ್ಲಿ ಆಗಲಿ ರಬ್ಬರಿನ ಆಮದು ಅಥವಾ ರಫ್ತುಗಳನ್ನು ನಿಷೇಧಿಸುವುದಕ್ಕಾಗಿ, ನಿರ್ಬಂಧಿಸುವುದಕ್ಕಾಗಿ ಅಥವಾ ಅನ್ಯಥಾ ನಿಯಂತ್ರಿಸುವುದಕ್ಕಾಗಿ ಉಪಬಂಧವನ್ನು ಕಲ್ಪಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ಯಾವುದೇ ಆದೇಶವು ಅನ್ವಯವಾಗುವ ಎಲ್ಲ ಸರಕುಗಳನ್ನು, ಸಮುದ್ರ ಸೀಮಾ ಸುಂಕಗಳ ಅಧಿನಿಯಮ, 1878 (1878ರ VIII)ರ 19ನೇ ಪ್ರಕರಣದ ಮೇರೆಗೆ ಯಾವ ಸರಕುಗಳ ಆಮದು ಅಥವಾ ರಫ್ತನ್ನು ನಿಷೇಧಿಸಲಾಗಿದೆಯೋ ಅಥವಾ ನಿರ್ಬಂಧಿಸಲಾಗಿದೆಯೋ ಆ ಸರಕುಗಳೆಂದು ಭಾವಿಸತಕ್ಕುದು; ಮತ್ತು ಆ ಅಧಿನಿಯಮದ 183ನೇ ಪ್ರಕರಣದಲ್ಲಿರುವ "ತಕ್ಕುದು" ಎಂಬ ಪದದ ಬದಲಾಗಿ "ಬಹುದು" ಎಂಬ ಪದವನ್ನು ಸೇರಿಸಿದ್ದರೆ ಹೇಗೋ ಹಾಗೆ ಆ ಪ್ರಕರಣವು ಜಾರಿಯಾಗತಕ್ಕುದು ಎಂಬುದನ್ನು ಹೊರತುಪಡಿಸಿ, ಆ ಅಧಿನಿಯಮದ ಎಲ್ಲ ಉಪಬಂಧಗಳು ತದನುಸಾರವಾಗಿ ಜಾರಿಯಾಗತಕ್ಕುದು.

(3) ಯಾರೇ ವ್ಯಕ್ತಿಯು, (1)ನೇ ಉಪಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಆದೇಶವನ್ನು ಉಲ್ಲಂಘಿಸಿದರೆ, ಅವನು, (2)ನೇ ಉಪಪ್ರಕರಣದ ಮೂಲಕ ಅನ್ವಯಪಡಿಸಿರುವಂತೆ ಸಮುದ್ರ ಸೀಮಾ ಸುಂಕಗಳ ಅಧಿನಿಯಮ, 1878 (1878ರ ಗಿಋಋಋ)ರ ಉಪಬಂಧಗಳ ಮೇರೆಗೆ ಅವನು ಗುರಿಯಾಗತಕ್ಕ ಯಾವುದೇ ಮುಟ್ಟುಗೋಲಿಗೆ ಅಥವಾ ದಂಡಕ್ಕೆ ಪ್ರತಿಕೂಲವಾಗದಂತೆ, ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

**12. ಹೊಸ ರಬ್ಬರ್ ಉಪಕರವನ್ನು ವಿಧಿಸುವುದು.**- (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ, ಈ ಅಧಿನಿಯಮದ ಉದ್ದೇಶಗಳಿಗಾಗಿ, ಭಾರತದಲ್ಲಿ ಉತ್ಪಾದಿಸಲಾದ ಎಲ್ಲ ರಬ್ಬರಿನ ಮೇಲೆ ಕೇಂದ್ರ ಸರ್ಕಾರವು ನಿಗದಿಪಡಿಸಬಹುದಾದಂತೆ, ಹಾಗೆ ಉತ್ಪಾದಿಸಲಾದ ಪ್ರತಿ ಕಿಲೋಗ್ರಾಂ ರಬ್ಬರಿಗೆ ಎರಡು ರೂಪಾಯಿಗೆ ಮೀರದ ದರದಲ್ಲಿ, ಅಬಕಾರಿ ಸುಂಕವನ್ನು ಉಪಕರವಾಗಿ ವಿಧಿಸತಕ್ಕುದು.

(2) (1)ನೇ ಉಪಪ್ರಕರಣದ ಮೇರೆಗೆ ವಿಧಿಸಲಾದ ಅಬಕಾರಿ ಸುಂಕವನ್ನು, ಈ ಸಂಬಂಧದಲ್ಲಿ ರಚಿಸಲಾದ ನಿಯಮಗಳಿಗನುಸಾರವಾಗಿ, ಮಂಡಲಿಯು, ರಬ್ಬರನ್ನು ಉತ್ಪಾದಿಸುವ ಎಸ್ಟೇಟಿನ ಒಡೆಯನಿಂದಾಗಲೀ ಅಥವಾ ಅಂಥ ರಬ್ಬರನ್ನು ಉಪಯೋಗಿಸುವ ತಯಾರಕನಿಂದಾಗಲೀ, ವಸೂಲ್ಮಾಡತಕ್ಕುದು.

(3) ಒಡೆಯನು ಅಥವಾ ಸಂದರ್ಭಾನುಸಾರ ತಯಾರಕನು, ಸುಂಕದ ಮೊಬಲಗನ್ನು ಸಂದಾಯ ಮಾಡಬೇಕೆಂದು ಮಂಡಲಿಯು ನೀಡಿದ ತಗಾದೆ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಮಂಡಲಿಗೆ ಸಂದಾಯ ಮಾಡತಕ್ಕುದು ಮತ್ತು ಅವನು ಹಾಗೆ ಸಂದಾಯ ಮಾಡಲು ತಪ್ಪಿದರೆ, ಆ ಸುಂಕವನ್ನು, ಒಡೆಯನಿಂದ ಅಥವಾ ಸಂದರ್ಭಾನುಸಾರ, ತಯಾರಕನಿಂದ ಭೂಕಂದಾಯದ ಬಾಕಿಯಂತೆ ವಸೂಲ್ಮಾಡಬಹುದು.

(4) ಈ ಪ್ರಕರಣದ ಮೇರೆಗೆ ವಿಧಿಸಲಾದ ಅಬಕಾರಿ ಸುಂಕದ ಮೊಬಲಗನ್ನು ನಿರ್ಧರಿಸಲು ಮಂಡಲಿಗೆ ಅನುವು ಮಾಡಿಕೊಡುವ ಉದ್ದೇಶಕ್ಕಾಗಿ-

(ಎ) ಮಂಡಲಿಯು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಯಾವ ಅವಧಿಗೆ ಸಂಬಂಧಿಸಿ ನಿರ್ಧರಣೆಯನ್ನು ಮಾಡತಕ್ಕುದೋ ಆ ಅವಧಿಯನ್ನು ನಿಗದಿಪಡಿಸತಕ್ಕುದು, ಮತ್ತು

(ಬಿ) 20ನೇ ಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಯಾರೇ ಒಡೆಯನು ಮತ್ತು ಪ್ರತಿಯೊಬ್ಬ ತಯಾರಕನು, ವಿವರಪಟ್ಟಿಕೆಯು ಯಾವ ಅವಧಿಗೆ ಸಂಬಂಧಪಟ್ಟಿದೆಯೋ ಆ ಅವಧಿಯ ಮುಕ್ತಾಯದ ತರುವಾಯ ಹದಿನೈದು

ದಿನಗಳಿಗೆ ಮೀರದಂತೆ ಕೆಳಕಂಡವುಗಳನ್ನು ನಮೂದಿಸುವ ಮೂಲಕ ಆ ವಿವರಪಟ್ಟಿಕೆಯನ್ನು ಮಂಡಲಿಗೆ ಸಲ್ಲಿಸತಕ್ಕದ್ದು,-

(i) ಒಬ್ಬ ಒಡೆಯನ ಸಂದರ್ಭದಲ್ಲಿ, ಅಂಥ ಪ್ರತಿಯೊಂದು ಅವಧಿಯಲ್ಲಿ ಆ ಎಸ್ಟೇಟಿನಲ್ಲಿ ಉತ್ಪಾದಿಸುವ ರಬ್ಬರಿನ ಒಟ್ಟು ಪರಿಮಾಣ:

ಪರಂತು, ಭಾಗಶಃ ಭಾರತದ ಒಳಗೆ ಮತ್ತು ಭಾಗಶಃ ಭಾರತದ ಹೊರಗೆ ಇರುವ ಒಂದು ಎಸ್ಟೇಟಿನ ಸಂದರ್ಭದಲ್ಲಿ, ಒಡೆಯನು ಸದರಿ ವಿವರಪಟ್ಟಿಕೆಯಲ್ಲಿ ಭಾರತದ ಒಳಗೆ ಮತ್ತು ಭಾರತದ ಹೊರಗೆ ಉತ್ಪಾದಿಸಲಾದ ರಬ್ಬರಿನ ಪರಿಮಾಣವನ್ನು ಪ್ರತ್ಯೇಕವಾಗಿ ತೋರಿಸಿರತಕ್ಕುದು;

(ii) ತಯಾರಕನ ಸಂದರ್ಭದಲ್ಲಿ, ಭಾರತದಲ್ಲಿ ಉತ್ಪಾದಿಸಲಾದ ರಬ್ಬರಿನ ಪೈಕಿ ಅಂಥ ಅವಧಿಯಲ್ಲಿ ಅವನು ಉಪಯೋಗಿಸಿದ ರಬ್ಬರಿನ ಒಟ್ಟು ಪರಿಮಾಣ.

(5) ಯಾರೇ ಒಡೆಯನು ಅಥವಾ ತಯಾರಕನು, (4)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ವಿವರಪಟ್ಟಿಕೆಯನ್ನು ನಿಯಮಿಸಿದ ಅವಧಿಯೊಳಗೆ ಸಲ್ಲಿಸಲು ತಪ್ಪಿದರೆ, ಅಥವಾ ಅವನು ಮಂಡಲಿಗೆ, ಸರಿಯಾಗಿಲ್ಲವೆಂದು ಅಥವಾ ದೋಷಯುಕ್ತವಾಗಿದೆಯೆಂದು ನಂಬಲು ಕಾರಣವಿರುವಂಥ ವಿವರಪಟ್ಟಿಕೆಯನ್ನು ಸಲ್ಲಿಸಿದರೆ, ಅದು ನಿಯಮಿಸಬಹುದಾದಂಥ ರೀತಿಯಲ್ಲಿ ಅಬಕಾರಿ ಸುಂಕದ ಮೊಬಲಗನ್ನು ನಿರ್ಧರಿಸಬಹುದು.

(6) ಈ ಪ್ರಕರಣದ ಮೇರೆಗೆ ಮಾಡಲಾದ ನಿರ್ಧರಣೆಯಿಂದ ಬಾಧಿತನಾದ ಯಾರೇ ವ್ಯಕ್ತಿಯು, (3)ನೇ ಉಪಪ್ರಕರಣದ ಮೇರೆಗೆ ಅವನಿಗೆ ನೋಟೀಸನ್ನು ಜಾರಿ ಮಾಡಿದ ಮೂರು ತಿಂಗಳುಗಳೊಳಗಾಗಿ, ಕರನಿರ್ಧರಣೆಯ ರದ್ದಿಯಾತಿ ಅಥವಾ ಮಾರ್ಪಾಡಿಗಾಗಿ ಜಿಲ್ಲಾ ನ್ಯಾಯಾಧೀಶನಿಗೆ ಅರ್ಜಿ ಸಲ್ಲಿಸಬಹುದು ಮತ್ತು ಜಿಲ್ಲಾ ನ್ಯಾಯಾಧೀಶನು, ಮಂಡಲಿಗೆ ಅಹವಾಲನ್ನು ಹೇಳಿಕೊಳ್ಳುವ ಒಂದು ಅವಕಾಶವನ್ನು ಕೊಟ್ಟ ತರುವಾಯ, ಅವನು ಉಚಿತವೆಂದು ಯೋಚಿಸಬಹುದಾದಂಥ ಆದೇಶವನ್ನು ಹೊರಡಿಸತಕ್ಕುದು ಮತ್ತು ಆ ಆದೇಶವು ಅಂತಿಮವಾಗಿರತಕ್ಕುದು.

(7) ಈ ಪ್ರಕರಣದ ಮೇರೆಗೆ ವಸೂಲಾದ ಅಬಕಾರಿ ಸುಂಕದ ಉತ್ಪತ್ತಿಯಿಂದ, ಕೇಂದ್ರ ಸರ್ಕಾರವು ನಿರ್ಧರಿಸಿದಂತೆ ವಸೂಲಿಗೆ ತಗುಲಿದ ವೆಚ್ಚವನ್ನು ಕಳೆದು-ಉಳಿದ ಮೊಬಲಗನ್ನು ಮೊದಲು ಭಾರತದ ಸಂಚಿತ ನಿಧಿಗೆ ಜಮೆ ಮಾಡತಕ್ಕುದು ಮತ್ತು ಆ ತರುವಾಯ ಸಂಸತ್ತು ಈ ಸಂಬಂಧದಲ್ಲಿ ಕಾನೂನಿನ ಮೂಲಕ ಹಣ ವಿನಿಯೋಗಕ್ಕೆ ಉಪಬಂಧ ಕಲ್ಪಿಸಿದರೆ, ಈ ಅಧಿನಿಯಮದ ಉದ್ದೇಶಗಳಿಗಾಗಿ ಉಪಯೋಗಿಸಿಕೊಳ್ಳುವುದಕ್ಕಾಗಿ ಕೇಂದ್ರ ಸರ್ಕಾರವು ಆ ಹಣವನ್ನು ಮಂಡಲಿಗೆ ಸಂದಾಯ ಮಾಡತಕ್ಕುದು.

**13. ರಬ್ಬರ್ ಮಾರಾಟದ ಗರಿಷ್ಠ ಮತ್ತು ಕನಿಷ್ಠ ದರಗಳನ್ನು ನಿಗದಿಪಡಿಸುವ ಅಧಿಕಾರ.-** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ಬಗೆಯ ರಬ್ಬರಿನ, ಯಾವುದೇ ವರ್ಗದ ವ್ಯವಹಾರದ ಕ್ರಮದಲ್ಲಿ, ಗರಿಷ್ಠ ಬೆಲೆ ಅಥವಾ ಕನಿಷ್ಠ ಬೆಲೆಯನ್ನು ಅಥವಾ ವಿಧಿಸತಕ್ಕ ಗರಿಷ್ಠ ಮತ್ತು ಕನಿಷ್ಠ ಬೆಲೆಗಳನ್ನು ನಿಗದಿಪಡಿಸಬಹುದು.

(2) ಯಾವುದೇ ಅಂಥ ಆದೇಶವು, ಒಂದೇ ಬಗೆಯ ರಬ್ಬರಿನ ಬೇರೆ ಬೇರೆ ವರ್ಗಗಳ ವ್ಯವಹಾರದ ಕ್ರಮದಲ್ಲಿ ವಿಧಿಸಬೇಕಾದ ಬೇರೆ ಬೇರೆ ಗರಿಷ್ಠ ಅಥವಾ ಕನಿಷ್ಠ ಬೆಲೆಗಳನ್ನು ನಿಗದಿಪಡಿಸಬಹುದು.

(3) ಯಾರೇ ವ್ಯಕ್ತಿಯು, ಈ ಸಂಬಂಧದಲ್ಲಿ (1)ನೇ ಉಪಪ್ರಕರಣದ ಮೇರೆಗೆ ನಿಗದಿಪಡಿಸಲಾದ ಗರಿಷ್ಠ ದರಕ್ಕಿಂತ ಹೆಚ್ಚು, ಅಥವಾ ಕನಿಷ್ಠ ದರಕ್ಕಿಂತ ಕಡಿಮೆ ದರದಲ್ಲಿ ರಬ್ಬರನ್ನು ಕೊಂಡುಕೊಂಡರೆ ಅಥವಾ ಮಾರಾಟ ಮಾಡಿದರೆ, ಅಥವಾ ಕೊಂಡುಕೊಳ್ಳಲು ಅಥವಾ ಮಾರಾಟ ಮಾಡಲು ಒಪ್ಪಿದರೆ, ಅವನು, ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ, ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

**14. ರಬ್ಬರಿನ ವಹಿವಾಟಿಗೆ ಲೈಸೆನ್ಸು ನೀಡಿಕೆ.–** ಮಂಡಲಿಯು ನೀಡಿದ ಸಾಮಾನ್ಯ ಅಥವಾ ವಿಶೇಷ ಲೈಸೆನ್ಸಿನ ನಿಬಂಧನೆಗಳ ಮೇರೆಗೆ ಮತ್ತು ಅದರ ಅನುಸಾರವಾಗಿ ಹೊರತು, ರಬ್ಬರನ್ನು ಯಾರೇ ವ್ಯಕ್ತಿಯೂ ಮಾರಾಟ ಮಾಡತಕ್ಕುದಲ್ಲ ಅಥವಾ ಅನ್ಯಥಾ ವಿಲೇವಾರಿ ಮಾಡತಕ್ಕುದಲ್ಲ ಮತ್ತು ಯಾರೇ ವ್ಯಕ್ತಿಯೂ ಕೊಂಡುಕೊಳ್ಳತಕ್ಕುದಲ್ಲ ಅಥವಾ ಅನ್ಯಥಾ ಆರ್ಜಿಸತಕ್ಕುದಲ್ಲ.

**15. 14ನೇ ಪ್ರಕರಣದ ಮೇರೆಗಿನ ಲೈಸೆನ್ಸುಗಳನ್ನು ಕುರಿತ ಉಪಬಂಧಗಳು.–** (1) 14ನೇ ಪ್ರಕರಣದ ಮೇರೆಗೆ ನೀಡಿದ ಪ್ರತಿಯೊಂದು ಸಾಮಾನ್ಯ ಲೈಸೆನ್ಸನ್ನು, ಮಂಡಲಿಯು, ಭಾರತ ರಾಜಪತ್ರದಲ್ಲಿ ಮತ್ತು ಅದು ನಿರ್ದೇಶಿಸಬಹುದಾದಂಥ ವೃತ್ತಪತ್ರಿಕೆಗಳಲ್ಲಿ ಪ್ರಕಟಿಸತಕ್ಕುದು.

(2) 14ನೇ ಪ್ರಕರಣದ ಮೇರೆಗೆ ನೀಡಿದ ವಿಶೇಷ ಲೈಸೆನ್ಸು, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ಮಾತ್ರ ಮಾನ್ಯತೆ ಹೊಂದಿರತಕ್ಕುದು:

ಪರಂತು, ಮಂಡಲಿಯು ಕಾಲಕಾಲಕ್ಕೆ ಯಾವುದೇ ಅಂಥ ಲೈಸೆನ್ಸಿನ ಮಾನ್ಯತೆಯ ಅವಧಿಯನ್ನು ವಿಸ್ತರಿಸಬಹುದು.

(3) 14ನೇ ಪ್ರಕರಣದ ಮೇರೆಗೆ ನೀಡಿದ ವಿಶೇಷ ಲೈಸೆನ್ಸನ್ನು ಮಂಡಲಿಯು ಲಿಖಿತದಲ್ಲಿ ಕಾರಣಗಳನ್ನು ದಾಖಲು ಮಾಡಿ ಯಾವುದೇ ಕಾಲದಲ್ಲಿ ರದ್ದುಗೊಳಿಸಬಹುದು ಮತ್ತು ಹಾಗೆ ರದ್ದುಗೊಳಿಸಿದ ತರುವಾಯ, ಅದನ್ನು ಯಾರಿಗೆ ನೀಡಲಾಗಿತ್ತೋ ಆ ವ್ಯಕ್ತಿಯು ಮಂಡಲಿಗೆ ಅದನ್ನು ವಾಪಸ್ಸು ಕೊಡತಕ್ಕುದು.

(4) ಈ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ವ್ಯಾಪಾರಿಯಾಗಿ ಅಥವಾ ತಯಾರಕನಾಗಿ ವ್ಯವಹಾರ ಮಾಡುತ್ತಿದ್ದಂತಹ ವ್ಯಕ್ತಿಯು ವಿಶೇಷ ಲೈಸೆನ್ಸಿಗಾಗಿ ಸಲ್ಲಿಸಿದ ಅರ್ಜಿಯನ್ನು, ಮಂಡಲಿಯು, ಲಿಖಿತದಲ್ಲಿ ವಿಶೇಷ ಕಾರಣಗಳನ್ನು ದಾಖಲು ಮಾಡದ ಹೊರತು ತಿರಸ್ಕರಿಸತಕ್ಕುದಲ್ಲ.

**16. ರಬ್ಬರ್ ಸ್ವಾಧೀನದ ಮೇಲೆ ನಿರ್ಬಂಧ.–** (1) ಒಂದು ಎಸ್ಟೇಟಿನ ಒಡೆಯ ಅಥವಾ ಅಧಿಭೋಗದಾರನಲ್ಲದ ಯಾರೇ ವ್ಯಕ್ತಿಯು ಅಥವಾ 14ನೇ ಪ್ರಕರಣದ ಮೇರೆಗೆ ಮಂಡಲಿಯು ನೀಡಿದ ಸಾಮಾನ್ಯ ಅಥವಾ ವಿಶೇಷ ಲೈಸೆನ್ಸಿನ ಮೇರೆಗೆ ರಬ್ಬರಿನ ಆರ್ಜನೆ ಮಾಡಿರುವ ಯಾರೇ ವ್ಯಕ್ತಿಯು ಯಾವುದೇ ರಬ್ಬರನ್ನು ತನ್ನ ಸ್ವಾಧೀನದಲ್ಲಿ ಹೊಂದಿರತಕ್ಕುದಲ್ಲ.

(2) (1)ನೇ ಉಪಪ್ರಕರಣದ ಉಲ್ಲಂಘನೆಯ ಬಗ್ಗೆ ಅಧಿವಿಚಾರಣೆಯನ್ನು ನಡೆಸುವ ಯಾವುದೇ ನ್ಯಾಯಾಲಯವು, 26ನೇ ಪ್ರಕರಣದ ಉಪಬಂಧಗಳಿಗೆ ಪ್ರತಿಕೂಲವಾಗದಂತೆ, ಯಾವ ರಬ್ಬರಿನ ಸಂಬಂಧದಲ್ಲಿ ಅಂಥ ಉಲ್ಲಂಘನೆಯನ್ನು ಮಾಡಲಾಗಿದೆ ಎಂದು ನ್ಯಾಯಾಲಯವು

ಮನದಟ್ಟು ಮಾಡಿಕೊಂಡಿರುವುದೋ ಆ ಯಾವುದೇ ರಬ್ಬರನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕುದೆಂದು ನಿರ್ದೇಶಿಸಬಹುದು.

**17. ಗಿಡ ನಾಟಿ ಮಾಡಿಕೊಳ್ಳುವುದಕ್ಕಾಗಿ ಅಥವಾ ಮರು ನಾಟಿ ಮಾಡುವುದಕ್ಕಾಗಿ ಲೈಸೆನ್ಸುಗಳು.–** (1) ಮಂಡಲಿಯು ನೀಡಿದ ವಿಶೇಷ ಲೈಸೆನ್ಸಿನ ಮೇರೆಗೆ ಮತ್ತು ಅದರ ಷರತ್ತುಗಳಿಗನುಸಾರವಾಗಿ ಹೊರತು ಯಾರೇ ವ್ಯಕ್ತಿಯು ರಬ್ಬರ್ ಗಿಡವನ್ನು ನಾಟಿ ಮಾಡತಕ್ಕುದಲ್ಲ ಅಥವಾ ಮರು ನಾಟಿ ಮಾಡತಕ್ಕುದಲ್ಲ.

(2) ಈ ಪ್ರಕರಣದ ಮೇರೆಗೆ ನೀಡಲಾದ ಲೈಸೆನ್ಸಿನಲ್ಲಿ, ಯಾವ ಪ್ರದೇಶದಲ್ಲಿ ರಬ್ಬರ್ ಗಿಡವನ್ನು ನಾಟಿ ಮಾಡಬಹುದೋ ಅಥವಾ ಮರು ನಾಟಿ ಮಾಡಬಹುದೋ ಆ ಪ್ರದೇಶವನ್ನು ಮತ್ತು ಯಾವ ಅವಧಿಯವರೆಗೆ ಆ ಲೈಸೆನ್ಸು ಮಾನ್ಯವಾಗಿರತಕ್ಕುದೋ ಆ ಅವಧಿಯನ್ನು ನಿರ್ದಿಷ್ಟಪಡಿಸತಕ್ಕುದು.

(3) ಈ ಪ್ರಕರಣದ ಮೇರೆಗೆ ಯಾವ ಭೂಮಿಗೆ ಸಂಬಂಧಿಸಿ ಲೈಸೆನ್ಸ್ ನೀಡಲಾಗಿತ್ತೋ ಆ ಭೂಮಿಯ ಹೊರತು ಬೇರೆ ಭೂಮಿಗೆ ಅದು ವರ್ಗಾವಣೆಯಾಗತಕ್ಕುದ್ದಲ್ಲ.

**18. ಲೈಸೆನ್ಸುದಾರರು ಸಲ್ಲಿಸಬೇಕಾದ ವರದಿಗಳು.–** (1) 17ನೇ ಪ್ರಕರಣದ ಮೇರೆಗೆ ನೀಡಲಾದ ಲೈಸೆನ್ಸಿನ ಪ್ರತಿಯೊಬ್ಬ ಧಾರಕನು, ಮಂಡಲಿಯು ಅಗತ್ಯಪಡಿಸಬಹುದಾದಂಥ ಕಾಲಗಳಲ್ಲಿ, ವರದಿಯು ಯಾವ ಅವಧಿಗೆ ಸಂಬಂಧಿಸಿರುವುದೋ ಆ ಅವಧಿಯಲ್ಲಿ ಹೊಸದಾಗಿ ಗಿಡ ನಾಟಿ ಮಾಡಿರುವ ಅಥವಾ ಮರು ನಾಟಿ ಮಾಡಿರುವ ಪ್ರದೇಶಗಳನ್ನು ನಿರ್ದಿಷ್ಟಪಡಿಸುವ ಮತ್ತು ಮಂಡಲಿಯು ಅಗತ್ಯಪಡಿಸಬಹುದಾದಂಥ ಇತರ ವಿವರಗಳನ್ನು ಒಳಗೊಂಡಿರುವ ವರದಿಗಳನ್ನು ಸಲ್ಲಿಸತಕ್ಕುದು.

(2) ಲೈಸೆನ್ಸನ್ನು ತಪ್ಪು ನಿರೂಪಣೆಯಿಂದ ಅಥವಾ ಮೋಸದಿಂದ ಪಡೆಯಲಾಗಿತ್ತೆಂದು ಮಂಡಲಿಗೆ ಮನವರಿಕೆಯಾದರೆ ಅಥವಾ ಲೈಸೆನ್ಸುದಾರನು ಆ ಲೈಸೆನ್ಸಿನ ಯಾವುದೇ ನಿಬಂಧನೆಗಳನ್ನು ಉಲ್ಲಂಘಿಸಿದರೆ ಅಥವಾ ಲೈಸೆನ್ಸುದಾರನು (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ವರದಿಯನ್ನು ಸಲ್ಲಿಸಲು ತಪ್ಪಿದರೆ, ಮಂಡಲಿಯು, 17ನೇ ಪ್ರಕರಣದ ಮೇರೆಗೆ ನೀಡಿದ ಯಾವುದೇ ಲೈಸೆನ್ಸನ್ನು ರದ್ದುಪಡಿಸಬಹುದು.

**19. ವಿಶೇಷ ಲೈಸೆನ್ಸುಗಳಿಗಾಗಿ ಶುಲ್ಕಗಳು.–** ಮಂಡಲಿಯು, 14ನೇ ಪ್ರಕರಣ, 15ನೇ ಪ್ರಕರಣ ಅಥವಾ 17ನೇ ಪ್ರಕರಣದ ಮೇರೆಗೆ ವಿಶೇಷ ಲೈಸೆನ್ಸುಗಳನ್ನು ನೀಡಲು ಮತ್ತು ನವೀಕರಿಸಲು, ನಿಯಮಿಸಬಹುದಾದಂಥ ಶುಲ್ಕಗಳನ್ನು ವಿಧಿಸಬಹುದು.

**20. ವಿವರಪಟ್ಟಿಕೆಗಳ ಸಲ್ಲಿಕೆ ಮತ್ತು ಲೆಕ್ಕಪತ್ರಗಳ ನಿರ್ವಹಣೆ.–** ನಿಯಮಿಸಬಹುದಾದಂಥ ವಿನಾಯತಿಗೊಳಪಟ್ಟು, ಪ್ರತಿಯೊಬ್ಬ ಒಡೆಯನು, ಪ್ರತಿಯೊಬ್ಬ ತಯಾರಕನು, ಮತ್ತು ಒಡೆಯ ಅಥವಾ ತಯಾರಕನಾಗಿಲ್ಲದ ಆದರೆ, 14ನೇ ಪ್ರಕರಣದ ಮೇರೆಗೆ ನೀಡಲಾದ ವಿಶೇಷ ಲೈಸೆನ್ಸಿನ ಪ್ರತಿಯೊಬ್ಬ ಧಾರಕನು–

(ಎ) ನಿಯಮಿಸಬಹುದಾದಂಥ ಕಾಲಗಳಲ್ಲಿ, ಅಂಥ ನಮೂನೆಗಳಲ್ಲಿ, ಮತ್ತು ಅಂಥ ವಿವರಗಳನ್ನು ಒಳಗೊಂಡಿರುವಂಥ ವಿವರಪಟ್ಟಿಕೆಗಳನ್ನು ಮಂಡಲಿಗೆ ಸಲ್ಲಿಸತಕ್ಕದು;

(ಬಿ) ನಿಯಮಿಸಬಹುದಾದಂಥ ನಮೂನೆಯಲ್ಲಿ ಅವನ ಎಸ್ಟೇಟಿಗೆ ಅಥವಾ ಸಂದರ್ಭಾನುಸಾರ ವ್ಯವಹಾರಕ್ಕೆ ಸಂಬಂಧಪಟ್ಟ ನಿಜವಾದ ಮತ್ತು ಸರಿಯಾದ ಲೆಕ್ಕಪತ್ರಗಳನ್ನು ಮತ್ತು ಇತರ ದಾಖಲೆಗಳನ್ನು ಇಡತಕ್ಕುದು;

(ಸಿ) (ಬಿ) ಖಂಡದಲ್ಲಿ ಉಲ್ಲೇಖಿಸಿದ ಲೆಕ್ಕಪತ್ರಗಳನ್ನು ಮತ್ತು ದಾಖಲೆಗಳನ್ನು ಪರಿಶೀಲಿಸಲು ಈ ಬಗ್ಗೆ ಕೇಂದ್ರ ಸರ್ಕಾರವು ಅಥವಾ ಮಂಡಲಿಯು ಅಧಿಕಾರ ನೀಡಿದ ಯಾರೇ ವ್ಯಕ್ತಿಗೆ ಅಥವಾ ಅಧ್ಯಕ್ಷನು ಲಿಖಿತದಲ್ಲಿ ಅಧಿಕಾರ ನೀಡಿದ ಮಂಡಲಿಯ ಯಾರೇ ಸದಸ್ಯನಿಗೆ ಅಥವಾ ಮಂಡಲಿಯ ಯಾರೇ ಅಧಿಕಾರಿಗೆ ಅನುಮತಿ ನೀಡತಕ್ಕುದು.

**21. ಜಮೀನು ಮತ್ತು ಆವರಣಗಳ ಪರಿಶೀಲನೆ.–** ಈ ಬಗ್ಗೆ ಕೇಂದ್ರ ಸರ್ಕಾರವು ಅಥವಾ ಮಂಡಲಿಯು ಅಧಿಕಾರ ನೀಡಿದ ಯಾರೇ ವ್ಯಕ್ತಿಯು ಅಥವಾ ಅಧ್ಯಕ್ಷನು ಲಿಖಿತದಲ್ಲಿ ಅಧಿಕಾರ ನೀಡಿದ ಯಾರೇ ಸದಸ್ಯನು ಅಥವಾ ಮಂಡಲಿಯ ಯಾರೇ ಅಧಿಕಾರಿಯು ಈ ಅಧಿನಿಯಮದ ಮೇರೆಗೆ ಸಲ್ಲಿಸಲಾದಂಥ ಯಾವುದೇ ವಿವರಣೆಯನ್ನು ಅಥವಾ ವಿವರಪಟ್ಟಿಕೆಯನ್ನು ಪರಿಶೀಲಿಸುವ ಉದ್ದೇಶಕ್ಕಾಗಿ ಅಥವಾ ಈ ಅಧಿನಿಯಮದ ಯಾವುವೇ ಇತರ ಉದ್ದೇಶಗಳಿಗಾಗಿ, ಯಾವುದೇ ಯುಕ್ತ ಕಾಲದಲ್ಲಿ, ವ್ಯಾಪಾರಿಯ ವ್ಯವಹಾರದ ಯಾವುದೇ ಸ್ಥಳವನ್ನು ಅಥವಾ ತಯಾರಕನ ಯಾವುದೇ ಕಾರ್ಖಾನೆಯನ್ನು ಅಥವಾ ಇತರ ಆವರಣಗಳನ್ನು ಪರಿಶೀಲಿಸಬಹುದು.

**22. ಕೇಂದ್ರ ಸರ್ಕಾರದ ನಿಯಂತ್ರಣ.–** (1) ಮಂಡಲಿಯ ಎಲ್ಲ ಕಾರ್ಯಗಳು ಕೇಂದ್ರ ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟಿರತಕ್ಕುದು ಮತ್ತು ಆ ಸರ್ಕಾರವು ತಾನು ಯೋಗ್ಯವೆಂದು ಯೋಚಿಸಬಹುದಾದಂತೆ, ಮಂಡಲಿಯು ಕೈಗೊಂಡ ಯಾವುದೇ ಕ್ರಮವನ್ನು ರದ್ದುಪಡಿಸಬಹುದು, ಅಮಾನತ್ತಿನಲ್ಲಿಡಬಹುದು ಅಥವಾ ಮಾರ್ಪಾಟುಗೊಳಿಸಬಹುದು.

(2) ಕೇಂದ್ರ ಸರ್ಕಾರದಿಂದ ಅಧಿಕೃತನಾದ ಯಾರೇ ಅಧಿಕಾರಿಯು ಎಲ್ಲ ಯುಕ್ತ ಕಾಲಗಳಲ್ಲಿ ಪರಿಶೀಲನೆ ಮಾಡಲು ಮಂಡಲಿಯ ಎಲ್ಲ ದಾಖಲೆಗಳು ಲಭ್ಯವಿರತಕ್ಕುದು.

**23. ಅಪೀಲು.–** 14ನೇ ಪ್ರಕರಣದ, 15ನೇ ಪ್ರಕರಣದ ಅಥವಾ 17ನೇ ಪ್ರಕರಣದ ಉಪಬಂಧಗಳ ಮೇರೆಗೆ, ವಿಶೇಷ ಲೈಸೆನ್ಸನ್ನು ನೀಡಲು ಅಥವಾ ನವೀಕರಿಸಲು ನಿರಾಕರಿಸುವ ಅಥವಾ ಅದನ್ನು ರದ್ದುಗೊಳಿಸುವ ಮಂಡಲಿಯ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಆದೇಶವನ್ನು ಮಾಡಿದ ಅರವತ್ತು ದಿವಸಗಳೊಳಗಾಗಿ ಮತ್ತು ನಿಯಮಿಸಲಾದ ಶುಲ್ಕವನ್ನು ಸಂದಾಯ ಮಾಡಿದ ನಂತರ, ಕೇಂದ್ರ ಸರ್ಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು ಮತ್ತು ಅದರ ಮೇಲಿನ ಕೇಂದ್ರ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ಅಂಥ ತೀರ್ಮಾನಕ್ಕೆ ಒಳಪಟ್ಟು ಮಾತ್ರವೇ ಮಂಡಲಿಯ ಆದೇಶವು ಅಂತಿಮವಾಗಿರತಕ್ಕುದು ಮತ್ತು ಆ ತೀರ್ಮಾನವನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕುದಲ್ಲ.

**24. ಮಂಡಲಿಯ ಲೆಕ್ಕಪತ್ರಗಳು.–** (1) ಮಂಡಲಿಯು, ತಾನು ಸ್ವೀಕರಿಸಿದ ಅಥವಾ ಖರ್ಚು ಮಾಡಿದ ಎಲ್ಲ ಹಣಗಳ ಲೆಕ್ಕಪತ್ರಗಳನ್ನು ಹಾಗೆ ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ನಮೂನೆಯಲ್ಲಿ ಇಟ್ಟಿರತಕ್ಕುದು.

(2) ಮಂಡಲಿಯು, ಕೇಂದ್ರ ಸರ್ಕಾರದಿಂದ ನೇಮಕಗೊಂಡ ಲೆಕ್ಕಪರಿಶೋಧಕರಿಂದ ವಾರ್ಷಿಕವಾಗಿ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಮಾಡಿಸತಕ್ಕುದು ಮತ್ತು ಯಾವುದೇ ಬಾಬಿಗೆ ಮಾಡಿರುವ ವೆಚ್ಚವನ್ನು ಈ ಅಧಿನಿಯಮದ ಮೇರೆಗೆ ಸೂಕ್ತವಾಗಿ ಮಾಡಿಲ್ಲವೆಂದು

ಲೆಕ್ಕಪರಿಶೋಧಕರು ಅಭಿಪ್ರಾಯಪಟ್ಟರೆ ಅದನ್ನು ಒಪ್ಪಿಕೊಳ್ಳದಿರುವ ಅಧಿಕಾರವನ್ನು ಅವರು ಹೊಂದಿರತಕ್ಕುದು.

(3) ಮಂಡಲಿಯು ಅರ್ಜಿ ಸಲ್ಲಿಸಿದಾಗ, ಯಾವ ಬಾಬಿಗೆ ಮಾಡಿದ್ದ ವೆಚ್ಚಗಳನ್ನು (2)ನೇ ಉಪಪ್ರಕರಣದ ಮೇರೆಗೆ ಲೆಕ್ಕ ಪರಿಶೋಧಕರು ಒಪ್ಪಿಕೊಂಡಿರಲಿಲ್ಲವೋ ಅದನ್ನು ಕೇಂದ್ರ ಸರ್ಕಾರವು ಒಪ್ಪಬಹುದು.

**25. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ.–** ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳ ಈಡೇರಿಕೆಗಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯತೆಗೆ ಪ್ರತಿಕೂಲವಾಗದಂತೆ ಈ ಪ್ರಕರಣದ ಮೇರೆಗೆ ರಚಿಸಲಾದ ನಿಯಮಗಳು ಕೆಳಕಂಡ ಎಲ್ಲ ಅಥವಾ ಯಾವುವೇ ವಿಷಯಗಳಿಗೆ ಉಪಬಂಧಿಸಬಹುದು, ಎಂದರೆ:–

(i) 4ನೇ ಪ್ರಕರಣದ (3)ನೇ ಉಪಪ್ರಕರಣದ (ಡಿ) ಖಂಡದ ಮೇರೆಗೆ ಕೇಂದ್ರ ಸರ್ಕಾರವು ಮಂಡಲಿಯ ಸದಸ್ಯರ ನಾಮನಿರ್ದೇಶನ ಮಾಡುವುದನ್ನು ವಿನಿಯಮನಗೊಳಿಸುವ ತತ್ವಗಳು, ಮತ್ತು ಅದರ (ಬಿ) ಮತ್ತು (ಸಿ) ಖಂಡಗಳಲ್ಲಿ ಉಲ್ಲೇಖಿಸಿದ ಸದಸ್ಯರ ಚುನಾವಣೆ ಅಥವಾ ನಾಮನಿರ್ದೇಶನ:

ಪರಂತು, ಕೇಂದ್ರ ಸರ್ಕಾರವು ಅದರ ಅಧಿಕಾರಗಳನ್ನು ಚಲಾಯಿಸಿ ಯಾವುದೇ ನಾಮನಿರ್ದೇಶನವನ್ನು ಮಾಡುವುದಕ್ಕೆ ಮುಂಚೆ, (ಡಿ) ಖಂಡದಲ್ಲಿ ಉಲ್ಲೇಖಿಸಿದ ಹಿತಾಸಕ್ತಿಗೆ ಸಂಬಂಧಪಟ್ಟಂತೆ ತಾನು ಮನ್ನಣೆ ನೀಡಿದ ಸಂಘಗಳಿಂದ ಹೆಸರುಗಳ ಪಟ್ಟಿಯನ್ನು ತರಿಸಿಕೊಳ್ಳತಕ್ಕುದು;

(ii) ಮಂಡಲಿಯ ಸದಸ್ಯರ ಪದಾವಧಿ, ಯಾವ ಸಂದರ್ಭದಲ್ಲಿ ಮತ್ತು ಯಾವ ಪ್ರಾಧಿಕಾರಿಯಿಂದ ಅವರನ್ನು ತೆಗೆದುಹಾಕಬಹುದು ಮತ್ತು ಮಂಡಲಿಯಲ್ಲಿನ ಸಾಂದರ್ಭಿಕ ಸ್ಥಾನಗಳನ್ನು ತುಂಬುವುದು;

(iii) ಮಂಡಲಿಯ ಮತ್ತು ಅದರ ಸಮಿತಿಗಳ ಸಭೆಗಳಲ್ಲಿ ವ್ಯವಹಾರಗಳ ನಡವಳಿಕೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ, ಮತ್ತು ಯಾವುದೇ ಸಭೆಯಲ್ಲಿ ಕೋರಂಗೆ ಅಗತ್ಯವಿರತಕ್ಕ ಸದಸ್ಯರ ಸಂಖ್ಯೆ;

(iv) ಮಂಡಲಿಯು ನಡೆಸಿದ ವ್ಯವಹಾರದ ದಾಖಲೆಗಳನ್ನು ಮಂಡಲಿಯು ಇಟ್ಟುಕೊಂಡಿರುವುದು ಮತ್ತು ಅಂಥ ದಾಖಲೆಗಳ ಪ್ರತಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳಿಸುವುದು;

(v) ಪ್ರತಿ ವರ್ಷವೂ ಮಂಡಲಿಯು ನಡೆಸಬೇಕಾಗುವ ಸಭೆಗಳ ಕನಿಷ್ಠ ಸಂಖ್ಯೆ;

(vi) ವೆಚ್ಚವನ್ನು ವಹಿಸುವ ಬಗ್ಗೆ ಮಂಡಲಿಯ, ಅದರ ಅಧ್ಯಕ್ಷನ ಮತ್ತು ಸಮಿತಿಗಳ ಅಧಿಕಾರಗಳು ಮತ್ತು ರಬ್ಬರ್ ಉತ್ಪಾದನಾ ಆಯುಕ್ತನ ಮತ್ತು ಮಂಡಲಿ ಕಾರ್ಯದರ್ಶಿಯ ಅಧಿಕಾರಗಳು ಮತ್ತು ಕರ್ತವ್ಯಗಳು;

(vii) ಯಾವ ಷರತ್ತುಗಳಿಗೊಳಪಟ್ಟು ಮಂಡಲಿಯು ಭಾರತದ ಹೊರಗೆ ವೆಚ್ಚವನ್ನು ವಹಿಸಬಹುದಾಗಿದೆಯೋ ಆ ಷರತ್ತುಗಳು;

(viii) ಮಂಡಲಿಯ ಜಮೆಗಳ ಮತ್ತು ವೆಚ್ಚಗಳ ಆಯವ್ಯಯ ಅಂದಾಜುಗಳನ್ನು ಸಿದ್ಧಪಡಿಸುವುದು ಮತ್ತು ಯಾವ ಪ್ರಾಧಿಕಾರದಿಂದ ಅಂದಾಜುಗಳಿಗೆ ಮಂಜೂರು ನೀಡಬೇಕಾಗಿದೆಯೋ ಆ ಪ್ರಾಧಿಕಾರ;

(ix) ಮಂಡಲಿಯ ಆದಾಯ ಮತ್ತು ಖರ್ಚಿನ ಲೆಕ್ಕಪತ್ರಗಳ ನಿರ್ವಹಣೆ ಮತ್ತು ಅಂಥ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ;

(x) ಬ್ಯಾಂಕುಗಳಲ್ಲಿ ಮಂಡಲಿಯ ನಿಧಿಗಳ ಠೇವಣಿ ಮತ್ತು ಅಂಥ ನಿಧಿಗಳ ಹೂಡಿಕೆ;

(xi) ಯಾವುದೇ ಆಯವ್ಯಯ ಶೀರ್ಷಿಕೆಯಿಂದ ಯಾವುದೇ ಇತರ ಆಯವ್ಯಯ ಶೀರ್ಷಿಕೆಗೆ ಮಾಡಲಾದ ಅಂದಾಜು ಉಳಿತಾಯಗಳ ಪುನರ್-ವಿನಿಯೋಗ;

(xii) ಯಾವ ಷರತ್ತುಗಳಿಗೊಳಪಟ್ಟು ಮಂಡಲಿಯು ಹಣಕಾಸಿನ ಸಾಲ ಪಡೆಯಬಹುದೋ ಆ ಷರತ್ತುಗಳು;

(xiii) ಯಾವ ಷರತ್ತುಗಳಿಗೊಳಪಟ್ಟು ಮತ್ತು ಯಾವ ರೀತಿಯಲ್ಲಿ ಮಂಡಲಿಯು ಅಥವಾ ಮಂಡಲಿಯ ಪರವಾಗಿ ಕರಾರುಗಳನ್ನು ಮಾಡಿಕೊಳ್ಳಬಹುದೋ ಆ ಷರತ್ತುಗಳು ಮತ್ತು ಅಂಥ ರೀತಿ;

(xiv) ಈ ಅಧಿನಿಯಮದ ಮೇರೆಗಿನ ಮಂಡಲಿಯ ಯಾವುವೇ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಮಂಡಲಿಯ ಸಮಿತಿಗಳಿಗೆ ಅಥವಾ ಅಧ್ಯಕ್ಷನಿಗೆ ಅಥವಾ ಉಪಾಧ್ಯಕ್ಷನಿಗೆ ಅಥವಾ ಸದಸ್ಯರಿಗೆ ಅಥವಾ ಅಧಿಕಾರಿಗಳಿಗೆ ವಹಿಸಿಕೊಡುವುದು;

(xv) ಮಂಡಲಿಯು ನಿಯೋಜಿಸಿಕೊಳ್ಳಬಹುದಾಗಿರುವ ಸಿಬ್ಬಂದಿ ಮತ್ತು ಮಂಡಲಿಯ ಅಧಿಕಾರಿಗಳ ಮತ್ತು ಇತರ ನೌಕರರ ವೇತನ, ಭತ್ಯೆಗಳು ಮತ್ತು ರಜೆ ಹಾಗೂ ಇತರ ಸೇವಾ ಷರತ್ತುಗಳು;

(xvi) ಮಂಡಲಿಯ ಮತ್ತು ಅದರ ಸಮಿತಿಗಳ ಸದಸ್ಯರ ಪ್ರಯಾಣ ಹಾಗೂ ಇತರ ಭತ್ಯೆಗಳು;

(xvii) ಯಾವ ಉದ್ದೇಶಗಳಿಗಾಗಿ ಮಂಡಲಿಯ ನಿಧಿಗಳನ್ನು ವೆಚ್ಚ ಮಾಡಬಹುದಾಗಿದೆಯೋ ಆ ಉದ್ದೇಶಗಳು;

(xviii) ಮಂಡಲಿಯ ಮತ್ತು ಅದರ ವಿವಿಧ ಸಮಿತಿಗಳ ರಿಜಿಸ್ಟರ್‌ಗಳ ಮತ್ತು ಇತರ ದಾಖಲೆಗಳ ನಿರ್ವಹಣೆ;

(xix) ರಬ್ಬರ್ ಅಥವಾ ರಬ್ಬರಿನ ಯಾವುದೇ ಉತ್ಪನ್ನದ ಬಗ್ಗೆ ಯಾವುದೇ ಮಾಹಿತಿ ಅಥವಾ ಅಂಕಿಅಂಶಗಳ ಸಂಗ್ರಹಣೆ;

(xx) 10ನೇ ಪ್ರಕರಣದ ಮೇರೆಗೆ ನೋಂದಣಿಗಾಗಿ ಅಥವಾ ಅಂಥ ನೋಂದಣಿಯ ರದ್ದಿಯಾತಿಗಾಗಿ ಸಲ್ಲಿಸತಕ್ಕ ಅರ್ಜಿ ನಮೂನೆ, ಅಂಥ ಅರ್ಜಿಗಳಿಗೆ ಸಂದಾಯ

ಮಾಡಬೇಕಾದ ಫೀಜು, ನೋಂದಣಿ ನೀಡುವಿಕೆ ಅಥವಾ ರದ್ದಿಯಾತಿಯ ಬಗ್ಗೆ ಅನುಸರಿಸಬೇಕಾದ ಪ್ರಕ್ರಿಯೆ ಮತ್ತು ಮಂಡಲಿಯು ಇಡಬೇಕಾದ ರಿಜಿಸ್ಟರುಗಳು;

(xxJ) ಯಾವ ಸಂದರ್ಭಗಳಲ್ಲಿ ಮತ್ತು ಸನ್ನಿವೇಶಗಳಲ್ಲಿ 12ನೇ ಪ್ರಕರಣದ ಮೇರೆಗಿನ ಉತ್ಪಾದನಾ ಸುಂಕವನ್ನು ಕ್ರಮವಾಗಿ ಒಡೆಯನು ಮತ್ತು ತಯಾರಕನು ಸಂದಾಯ ಮಾಡತಕ್ಕುದೋ ಆ ಸಂದರ್ಭಗಳು ಮತ್ತು ಸನ್ನಿವೇಶಗಳು, ಯಾವ ರೀತಿಯಲ್ಲಿ ಸುಂಕದ ನಿರ್ಧರಣೆಯನ್ನು ಮಾಡಬಹುದಾಗಿದೆಯೋ, ಸಂದಾಯ ಮಾಡಬಹುದಾಗಿದೆಯೋ ಅಥವಾ ವಸೂಲ್ಮಾಡಬಹುದಾಗಿದೆಯೋ ಆ ರೀತಿ, ಸರಿಯಾದ ಸುಂಕದ ವಿಧಿಸುವಿಕೆ, ಸಂದಾಯ ಅಥವಾ ವಸೂಲಿಗಾಗಿ ವಿನಿಯಮನವು ಅವಶ್ಯಕವಾಗಿರುವಷ್ಟರಮಟ್ಟಿಗೆ ರಬ್ಬರಿನ ಉತ್ಪಾದನೆ, ತಯಾರಿಕೆ, ಸಾಗಣೆ ಅಥವಾ ಮಾರಾಟದ ವಿನಿಯಮನ;

(xxi) 14ನೇ ಪ್ರಕರಣದ ಅಥವಾ 17ನೇ ಪ್ರಕರಣದ ಮೇರೆಗಿನ ವಿಶೇಷ ಲೈಸೆನ್ಸುಗಳಿಗೆ ಇರುವ ಅರ್ಜಿ ನಮೂನೆ, ಅಂಥ ಲೈಸೆನ್ಸುಗಳ ನೀಡಿಕೆಗೆ ಅಥವಾ ನವೀಕರಣಕ್ಕೆ ಫೀಜು, ಮತ್ತು ಅಂಥ ಲೈಸೆನ್ಸುಗಳ ನಮೂನೆಗಳು;

(xxii) ಯಾವ ರೀತಿಯಲ್ಲಿ ರಬ್ಬರನ್ನು ವರ್ಗೀಕರಿಸತಕ್ಕುದು ಮತ್ತು ಮಾರುಕಟ್ಟೆ ಮಾಡತಕ್ಕುದೋ ಆ ರೀತಿ;

(xxiii) 23ನೇ ಪ್ರಕರಣದ ಮೇರೆಗೆ ಅಪೀಲುಗಳ ಬಗ್ಗೆ ಸಂದಾಯ ಮಾಡಬೇಕಾದ ಫೀಜು;

(xxiv) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಒಟ್ಟು ಮೂವತ್ತು ದಿವಸಗಳವರೆಗೆ ಇರಿಸತಕ್ಕುದು ಮತ್ತು ಅದನ್ನು ಹಾಗೆ ಇರಿಸಲಾದ ಪೂರ್ವೋಕ್ತ ಅಧಿವೇಶನದ ಅಥವಾ ನಿರಂತರ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಲು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕುದು ಅಥವಾ ಪರಿಣಾಮಕಾರಿಯಾಗತಕ್ಕುದಲ್ಲ. ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಕಾನೂನು ಮಾನ್ಯತೆಗೆ ಬಾಧಕವಾಗತಕ್ಕುದಲ್ಲ.

**26. ದಂಡಗಳು.**- (1) ಯಾರೇ ವ್ಯಕ್ತಿಯು -

(ಎ) 11ನೇ ಪ್ರಕರಣ ಅಥವಾ 13ನೇ ಪ್ರಕರಣವನ್ನು ಹೊರತುಪಡಿಸಿ ಈ ಅಧಿನಿಯಮದ ಯಾವುದೇ ಉಪಬಂಧವನ್ನು ಅಥವಾ ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ನಿಯಮವನ್ನು ಉಲ್ಲಂಘಿಸಿದರೆ;

(ಬಿ) ಈ ಅಧಿನಿಯಮದ ಮೇರೆಗೆ ಸಲ್ಲಿಸಬೇಕಾದ ಯಾವುದೇ ವರದಿಯಲ್ಲಿ ಅಥವಾ ವಿವರಣಪಟ್ಟಿಕೆಯಲ್ಲಿ ಸುಳ್ಳಾಗಿರುವ ಮತ್ತು ಸುಳ್ಳೆಂದು ಅವನಿಗೆ ಗೊತ್ತಿರುವ ಅಥವಾ ಸತ್ಯವೆಂದು ಅವನು ನಂಬದಿರುವ ವಿವರಣೆಯನ್ನು ಕೊಟ್ಟರೆ, ಅಥವಾ

(ಸಿ) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಮಂಡಲಿಯ ಯಾರೇ ಅಧಿಕಾರಿಗೆ ವಿಧಿಸಿದ ಅಥವಾ ವಹಿಸಿಕೊಡಲಾದ ಯಾವುದೇ ಕರ್ತವ್ಯ ನಿರ್ವಹಣೆಗೆ ಅಡ್ಡಿಯುಂಟು ಮಾಡಿದರೆ; ಅಥವಾ

(ಡಿ) ತನ್ನ ನಿಯಂತ್ರಣದಲ್ಲಿರುವ ಅಥವಾ ಅಭಿರಕ್ಷೆಯಲ್ಲಿರುವ ಯಾವುದೇ ಲೆಕ್ಕದ ಪುಸ್ತಕ ಅಥವಾ ಇತರ ದಾಖಲೆಯನ್ನು, ಅಧಿಕಾರ ಪಡೆದ ಯಾರೇ ಅಧಿಕಾರಿಯು ಅಂಥ ಪುಸ್ತಕ ಅಥವಾ ದಾಖಲೆಯನ್ನು ಹಾಜರುಪಡಿಸಲು ಅಗತ್ಯಪಡಿಸಿದಾಗ ಹಾಗೆ ಹಾಜರುಪಡಿಸಲು ತಪ್ಪಿದರೆ

– ಅವನು, ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(2) (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಅಪರಾಧವನ್ನು ಎಸಗಿದ ವ್ಯಕ್ತಿಯು ಒಂದು ಕಂಪನಿಯಾಗಿದ್ದರೆ, ಅಪರಾಧವು ನಡೆದ ಕಾಲದಲ್ಲಿ ಆ ಕಂಪನಿಯ ಪ್ರಭಾರವನ್ನು ಹೊಂದಿದ್ದ ಮತ್ತು ಅದರ ವ್ಯವಹಾರಗಳನ್ನು ನಡೆಸುವ ಬಗ್ಗೆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು ಮತ್ತು ಕಂಪನಿಯು ಸಹ, ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕುದು ಮತ್ತು ತದನುಸಾರವಾಗಿ ಅವನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗಲು ಬದ್ಧನಾಗತಕ್ಕುದು:

ಪರಂತು, ಅಂಥ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಗಟ್ಟಲು ತಾನು ಯಥೋಚಿತ ಜಾಗರೂಕತೆಯನ್ನು ವಹಿಸಿದ್ದೆನೆಂದು ಅಂಥ ಯಾರೇ ವ್ಯಕ್ತಿಯು ರುಜುವಾತುಪಡಿಸಿದರೆ, ಅವನನ್ನು ಈ ಪ್ರಕರಣದಲ್ಲಿರುವುದು ಯಾವುದೂ, ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ಶಿಕ್ಷೆಗೆ ಗುರಿಪಡಿಸತಕ್ಕುದಲ್ಲ.

(3) (2)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, (1)ನೇ ಉಪಪ್ರಕರಣದ ಮೇರೆಗಿನ ಒಂದು ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ನಿರ್ಲಕ್ಷ್ಯದ ಕಾರಣದಿಂದ ನಡೆಯಿತೆಂದು ರುಜುವಾತಾದರೆ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ಬಗ್ಗೆ ಅಪರಾಧಿಯೆಂದು ಭಾವಿಸತಕ್ಕುದು ಮತ್ತು ತದನುಸಾರವಾಗಿ ಅವನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗಲು ಬದ್ಧನಾಗತಕ್ಕುದು.

**ವಿವರಣೆ:**– ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) 'ಕಂಪನಿ' ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಅದು ಒಂದು ಫರ್ಮ್ ಅನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಒಂದು ಫರ್ಮಿನ ಸಂಬಂಧದಲ್ಲಿ "ನಿರ್ದೇಶಕ" ಎಂದರೆ ಆ ಫರ್ಮಿನ ಪಾಲುಗಾರ.

**27. ಪ್ರಾಸಿಕ್ಯೂಷನ್‌ಗಳ ಕಾರ್ಯವಿಧಾನ.–** ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧಕ್ಕಾಗಿ ಯಾವುದೇ ಪ್ರಾಸಿಕ್ಯೂಷನನ್ನು ಕೇಂದ್ರ ಸರ್ಕಾರದ ಅಥವಾ ಮಂಡಲಿಯ ಒಪ್ಪಿಗೆಯನ್ನು ಪಡೆದ ಹೊರತು ಅಥವಾ ಹಾಗೆ ಮಾಡಲು ಒಪ್ಪಿಗೆಯಿದ್ದ ಹೊರತು ಹೂಡತಕ್ಕುದಲ್ಲ.

**27ಎ. ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿ.–** ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟನ ಅಥವಾ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್‌ಗಿಂತ ಕೆಳ ದರ್ಜೆಯ ಯಾವುದೇ ನ್ಯಾಯಾಲಯವು, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಅಧಿವಿಚಾರಣೆ ಮಾಡತಕ್ಕುದಲ್ಲ.

**28. ಕಾನೂನು ವ್ಯವಹರಣೆಗಳ ಪ್ರತಿಬಂಧ.–** ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಮಂಡಲಿಯ ವಿರುದ್ಧ ಅಥವಾ ಅದರ ಯಾರೇ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಮಾಡಲು ಅವಕಾಶವಿರತಕ್ಕುದಲ್ಲ.

**29. ಕೇಂದ್ರ ಸರ್ಕಾರದ ತಾತ್ಕಾಲಿಕ ಅಧಿಕಾರಗಳು.–** ರಬ್ಬರ್ (ಉತ್ಪಾದನೆ ಮತ್ತು ಕ್ರಯವಿಕ್ರಯ) ತಿದ್ದುಪಡಿ ಅಧಿನಿಯಮ, 1954 (1954ರ ಸಂಖ್ಯೆ 54)ರ 21ನೇ ಪ್ರಕರಣದ ಮೂಲಕ ನಿರಸಿತವಾಗಿದೆ.

* * *